KCRO
KARNATAKA CHILD RIGHTS OBSERVATORY

# ಮಕ್ಕಳ ಹಕ್ಕುಗಳ ನಿಗಾ ಕೇಂದ್ರ

ಖಾಸಗಿ ಪ್ರಸಾರಕ್ಕಾಗಿ | ವಾರ್ತಾ ಪತ್ರಿಕೆ – ಮಾರ್ಚ್ 2009 | ಸಂಪುಟ 2 ಸಂಚಿಕೆ 1

ಸಂಪಾದಕೀಯ

## ಇನ್ನೆಷ್ಟು ದಿನ ಕಾಯಬೇಕು ಮಕ್ಕಳು?

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಈ ವರ್ಷ 20 ವರ್ಷ ತುಂಬುತ್ತದೆ. ಮಕ್ಕಳ ಬದುಕಿನ ಎಲ್ಲ ಆಯಾಮಗಳನ್ನು ಮಕ್ಕಳ ಹಕ್ಕುಗಳ ಒಡಂಬಡಿಕೆ ಮುಟ್ಟುತ್ತದೆ. ಮಕ್ಕಳೆಲ್ಲರೂ ಜೀವಂತವಾಗಿ ಆರೋಗ್ಯವಾಗಿ ಹುಟ್ಟಬೇಕೆಂದು ಆಶಿಸುವದಲ್ಲದೆ ಮಕ್ಕಳು ಅಕಾಲಿಕ ಮರಣಕ್ಕೀಡಾಗದೆ ಆರೋಗ್ಯದಿಂದ ಬದುಕಬೇಕೆಂದು ಒಡಂಬಡಿಕೆ ಬಯಸುತ್ತದೆ. ಬದುಕಿದರಷ್ಟೇ ಸಾಲದು, ಮಕ್ಕಳು ಯಾವುದೇ ತೊಂದರೆ, ತಕರಾರು, ಹಿಂಸೆ, ಶೋಷಣೆಯಿಲ್ಲದೆ ಬಾಲ್ಯವನ್ನು ಅನುಭವಿಸಬೇಕು, ಮುಂದೆ ಮನಸ್ಸುಗಳ ವಿಕಾಸ ಹೊಂದಲು ಅವಕಾಶಗಳನ್ನು ಪಡೆಯಬೇಕು, ತಮ್ಮ ಬಗ್ಗೆಯೇ ಅಲ್ಲದೆ ತಮ್ಮ ಸುತ್ತಮುತ್ತಲಿನ ಪರಿಸರ, ಸಮೂಹಗಳನ್ನು ಕುರಿತು ನಿರ್ದಿಷ್ಟವಾದ ಅಭಿಪ್ರಾಯಗಳನ್ನು ಮೂಡಿಸಿಕೊಳ್ಳುವವರಾಗಬೇಕು.

ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಇಷ್ಟೆಲ್ಲಾ ಆಸೆ ಇದೆ. ಎಲ್ಲ ಮಕ್ಕಳಿಗೆ ಈ ಎಲ್ಲ ಹಕ್ಕುಗಳು, ಅವಕಾಶಗಳು ಸಿಗುವುದು ಖಂಡಿತವಾದಲ್ಲಿ ಎಲ್ಲ ದೇಶಗಳು ಅಭಿವೃದ್ಧಿಯತ್ತ ಸಾಗುವುದರಲ್ಲಿ ಅನುಮಾನವೇ ಇಲ್ಲ. ಆದರೆ ವಾಸ್ತವವೇ ಬೇರೆ ರೀತಿ ಇದೆ. ಇಡೀ ದೇಶದಲ್ಲಿ ಜನ ವಿವಿಧ ರೀತಿಯ ಉದ್ಯೋಗಗಳನ್ನು, ಬದುಕನ್ನು ಅರಿಸಿಕೊಂಡು ವಲಸೆ ಹೋಗುತ್ತಿದ್ದಾರೆ. ತಮ್ಮ ತಮ್ಮ ಬದುಕನ್ನು ತಮ್ಮದೇ ರೀತಿಯಲ್ಲಿ ಭದ್ರ ಮಾಡಿಕೊಳ್ಳುವ ಅವಸರದಲ್ಲಿ ಹಲವಾರು ಬಾರಿ ತಮ್ಮ ಮಕ್ಕಳ ಬದುಕನ್ನು ಬಲಿಕೊಡುತ್ತಿದ್ದಾರೆ.

ಇಂದಿನ ಚಿಂತೆ ಹೇಗಾದರೂ ಮುಗಿದರೆ ಸಾಕು. ಅಥವಾ ನಾಳಿನ ಬದುಕು ಎಂತಹ ಕಷ್ಟವೋ, ಭಯವೋ ಎಂಬಂತಾಗಿ ನಾಳೆಗೆ ಕಾಯದೇ ಇಂದೇ ಜವಾಬ್ದಾರಿಗಳನ್ನು ತೊಳೆದುಕೊಳ್ಳುವ ಅವಸರ ತೋರಿಸುತ್ತಿದ್ದಾರೆ. ಈ ಎಲ್ಲವೂ ಮಕ್ಕಳ ಬದುಕಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ವಿವಿಧ ಸ್ತರಗಳಲ್ಲಿರುವ ಜನರ ಇಂತಹ ಸ್ವಭಾವಕ್ಕೆ ಬಾಲ್ಯ ವಿವಾಹ ಮತ್ತು ವಲಸೆ ಕಾರ್ಮಿಕರ ಮಕ್ಕಳ ಪರಿಸ್ಥಿತಿ ಜ್ವಲಂತ ಉದಾಹರಣೆ. ಶಾಲಾ ವಯಸ್ಸಿನ ಮಕ್ಕಳಿರಲಿ, ತೊಟ್ಟಿಲಲ್ಲಿ ಆಡುವ ಮಕ್ಕಳನ್ನೇ ಮದುವೆಯ ಉರುಳಿಗೆ ಹಾಕುವ ಮಂದಿ ಈಗಲೂ ಇದ್ದಾರೆಂದರೆ ಆಶ್ಚರ್ಯ ಪಡಬೇಕಿಲ್ಲ. ಖರ್ಚು ಕಡಿಮೆಯೆಂದೋ, ಇನ್ನು ತಡಮಾಡಿದರೆ ಹೆಣ್ಣು ಸಿಗುವುದಿಲ್ಲವೆಂದೋ, ಮನೆಯ ಹಿರಿಯರು ಬಲವಂತ ಮಾಡಿದರೆಂದೋ, ಬೆಳೆದ ಮೇಲೆ ಮಕ್ಕಳನ್ನು ಹಿಡಿಯಲಾಗುವುದಿಲ್ಲವೆಂದೋ, ಅಥವಾ ಯಾರೋ ದೊಡ್ಡವರು ನಡೆಸುವ ಉತ್ಸವದಲ್ಲಿ ನಾವೂ ಪಾಲ್ಗೊಳ್ಳಲೆಂದೋ, ಕುಟುಂಬದ ಹೆಸರು, ಆಸ್ತಿ ಉಳಿಸಿಕೊಳ್ಳಲೆಂದೋ, ಏನೋ ಒಂದು ಕುಂಟು ನೆಪ ಒಡ್ಡಿ, ಬಾಲ್ಯ ವಿವಾಹ ಮಾಡಬಾರದೆಂಬ ಕಾನೂನು ಉಲ್ಲಂಘಿಸುವವರು ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಿಗುತ್ತಾರೆ. ಇಲ್ಲಿ ಏಳುವ ಪ್ರಶ್ನೆಗಳು, ಬಾಲ್ಯ ವಿವಾಹಗಳನ್ನು ತಡೆಯಲು ನಿಯೋಜಿಸಿರುವ ಅಧಿಕಾರಿಗಳೇಕೆ ಮೌನವಾಗಿದ್ದಾರೆ? ಅವರಿಗೆ ಇಂತಹ ಕೆಲಸ ಮಾಡಲು ಇಷ್ಟವಿಲ್ಲವೆ? ಅಥವಾ ಬಹಳ ಮುಖ್ಯವಾಗಿ ಬಾಲ್ಯ ವಿವಾಹವನ್ನು ನಿಲ್ಲಿಸಬೇಕಾದ ಪ್ರಾಮುಖ್ಯತೆಯ ಅರಿವು ಇಲ್ಲವೇ ? ಅಥವಾ ಬಾಲ್ಯ ವಿವಾಹಗಳನ್ನು ನಿಲ್ಲಿಸಲು ಹೋದರೆ ಎದುರಿಸಬೇಕಾದ ವಿರೋಧವನ್ನು ತಡೆದುಕೊಳ್ಳಲು ಆಗುವುದಿಲ್ಲವೆ?

ಉದ್ಯೋಗ ಹುಡುಕಿಕೊಂಡು ಜನ ವಲಸೆ ಹೋಗುವುದು ಒಂದು ಆವಶ್ಯಕತೆ ಮತ್ತು ಹಕ್ಕು. ಯಾರು ಯಾರನ್ನೂ ಉದ್ಯೋಗ, ಬದುಕು ಅರಸಿ ಹೋದಾಗ ಅಥವಾ ಬಂದಾಗ ಬಲವಂತವಾಗಿ ತಡೆಯುವಂತಿಲ್ಲ. ಹೀಗೆ ವಲಸೆ ಹೋದ ಕುಟುಂಬಗಳ ಮಕ್ಕಳ ಬದುಕು ಹರಿದು ಹೋಗುತ್ತಿದೆ. ತಮ್ಮ ಹಳ್ಳಿಯ ಪರಿಸರ ಕಳೆದುಕೊಂಡು ನಗರಗಳ ಕೊಳೆಗೇರಿಗಳಲ್ಲಿ, ರೋಗ ರುಜಿನಗಳ ಅಪಾಯದಲ್ಲಿ ಬದುಕುವುದಾಗುತ್ತಿದೆ. ಶಿಕ್ಷಣದ ಅವಕಾಶಗಳಿಲ್ಲ, ರಕ್ಷಣೆಯ ಭರವಸೆಯಿಲ್ಲ. ಇವರೂ ಮಕ್ಕಳಲ್ಲವೆ? ಇವರ ಲೆಕ್ಕ ನಮ್ಮ ಶಿಕ್ಷಣ ಇಲಾಖೆಯ ಕಡತಗಳಲ್ಲಿ ಸಿಗುತ್ತಿಲ್ಲವೇಕೆ? ಈ ಮಕ್ಕಳ ಬಗ್ಗೆ ಚಿಂತಿಸಿ ಕ್ರಮ ಕೈಗೊಂಡು ರಕ್ಷಿಸುವ ಕೆಲಸ ಮಾಡುವುದು ಯಾರ ಜವಾಬ್ದಾರಿ?

ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ಈ ಎರಡು ವಿಚಾರಗಳನ್ನು ತೆಗೆದುಕೊಂಡು ರಾಜ್ಯ ಮಟ್ಟದಲ್ಲಿ ಎರಡು ಸಮಾಲೋಚನೆಗಳನ್ನು ನಡೆಸಿತು. ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳಲ್ಲದೆ, ಸರ್ಕಾರ, ಮಾಧ್ಯಮಗಳು, ವಿದ್ಯಾರ್ಥಿಗಳು ಮತ್ತು ಸಮುದಾಯದ ಪ್ರತಿನಿಧಿಗಳೂ ಭಾಗವಹಿಸಿದ್ದ ಈ ಸಮಾಲೋಚನೆಗಳಲ್ಲಿ ಪ್ರಸಕ್ತ ಸಮಸ್ಯೆಗಳನ್ನು ಎದುರಿಸಲು ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಹಲವಾರು ಸಲಹೆಗಳು ಹೊರಹೊಮ್ಮಿತು. ಈ ಸಂಚಿಕೆಯಲ್ಲಿ ಈ ಕುರಿತು ವರದಿಗಳು ಇವೆ. ಇದರೊಂದಿಗೆ ಪತ್ರಿಕೆಗಳಲ್ಲಿ ಮಕ್ಕಳ ಬದುಕಿನ ವಿವಿಧ ಆಯಾಮಗಳನ್ನು ಕುರಿತು ಎಂತಹ ವರದಿಗಳು ಎಷ್ಟು ಪ್ರಮಾಣದಲ್ಲಿ ಬರುತ್ತಿದೆ ಎಂಬುದನ್ನೂ ವಿಶ್ಲೇಷಿಸಿ ಮಾಹಿತಿ ನೀಡುತ್ತಿದ್ದೇವೆ.

ಇದರ ಜೊತೆಯಲ್ಲಿ ರಾಜ್ಯದ 2009–10ರ ಆಯವ್ಯಯವನ್ನು ಮಕ್ಕಳ ದೃಷ್ಟಿಕೋನದಿಂದ ವಿಶ್ಲೇಷಿಸುವ ಪ್ರಯತ್ನವನ್ನೂ ಸಹ ಮಾಡಿ, ಅದನ್ನು ಸಂಕ್ಷಿಪ್ತವಾಗಿ ನೀಡುತ್ತಿದ್ದೇವೆ. (ಸಂಪೂರ್ಣ ಮಾಹಿತಿಗೆ ನಮ್ಮ ಸಂಸ್ಥೆಯನ್ನು ಸಂಪರ್ಕಿಸಿ)

ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ಈ ವರ್ಷ ಮಕ್ಕಳ ಬದುಕಿನ ಹೊಸ ಹೊಸ ವಿಚಾರಗಳತ್ತ ತನ್ನ ಕ್ಷಕಿರಣ ಬೀರಲಿದೆ. ನಿಮ್ಮ ಸಲಹೆ ಸೂಚನೆ, ಅಭಿಪ್ರಾಯಗಳಿಗೆ ಸದಾ ಸ್ವಾಗತ.

**ವಾಸುದೇವ ಶರ್ಮಾ**
ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಪರವಾಗಿ.

### ಪರಿವಿಡಿ

ಈ ಸಂಚಿಕೆಯಲ್ಲಿ... ಪುಟ


- ಇಂದೇ ನಿಲ್ಲಿಸೋಣ ಬಾಲ್ಯ ವಿವಾಹ ! ಅದು ಮಕ್ಕಳ ಹಕ್ಕುಗಳ ಉಲ್ಲಂಘನೆ 2
- ಸುದ್ದಿಯಲ್ಲಿ ಮಕ್ಕಳು 3
- ಕಟ್ಟಡ ಕಾರ್ಮಿಕರ ಮಕ್ಕಳ ಹಿತರಕ್ಷಣೆ ಯಾರ ಹೊಣೆ? 4
- ವಿಧಾನಸೌಧದಲ್ಲಿ ಮಕ್ಕಳಿದ್ದಾರೆಯೇ? 5
- ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆ 6
- ಜಿಲ್ಲಾ ಮಟ್ಟದ ಮಕ್ಕಳ ಸಂಸತ್ 7
- ಮಕ್ಕಳು ಮತ್ತು ಆಯವ್ಯಯ 7
- ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳು 9
- ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ 10


unicef | CRT CHILD RIGHTS TRUST | KCRO KARNATAKA CHILD RIGHTS OBSERVATORY

ಸಂಪರ್ಕಕ್ಕಾಗಿ : ಚೈಲ್ಡ್ ರೈಟ್ಸ್ ಟ್ರಸ್ಟ್, 4606, 6ನೇ ಮಹಡಿ, ಹೈಪಾಯಿಂಟ್ 4, ಅರಮನೆ ರಸ್ತೆ, ಬೆಂಗಳೂರು 560001 ದೂ. 080–41138285 email: crtindia@yahoo.co.in

# ಇಂದೇ ನಿಲ್ಲಿಸೋಣ ಬಾಲ್ಯ ವಿವಾಹ ! ಅದು ಮಕ್ಕಳ ಹಕ್ಕುಗಳ ಉಲ್ಲಂಘನೆ

## ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಸಮಾಲೋಚನಾ ಕಾರ್ಯಾಗಾರದ ವರದಿ

ಬಾಲ್ಯ ವಿವಾಹಗಳನ್ನು ತಡೆಯುವುದರ ಮೂಲಕ ಎಲ್ಲ ಮಕ್ಕಳಿಗೆ ಬಾಲ್ಯ ಮತ್ತು ಅವರ ಹಕ್ಕುಗಳನ್ನು ಅನುಭವಿಸಲು ನೆರವಾಗಲು ಸರ್ಕಾರ ಬಾಲ್ಯ ವಿವಾಹ ನಿಷೇಧ ಕಾಯಿದೆಯನ್ನು ಹೊರಡಿಸಿದೆ. ಜೊತೆಗೆ ಬಾಲ್ಯ ವಿವಾಹಗಳನ್ನು ನಿಲ್ಲಿಸಲು ಮತ್ತು ಬಾಲ್ಯ ವಿವಾಹಗಳಿಂದ ಆಗುವ ಅನಾಹುತಗಳನ್ನು ಸಮುದಾಯಗಳಿಗೆ ಮನನ ಮಾಡಿಸುವ ಹಾಗೂ ಬಾಲ್ಯ ವಿವಾಹಗಳು ಆಗದಂತೆ ತಡೆಯಲು ಸರ್ಕಾರವು ಎಲ್ಲ ಜಿಲ್ಲೆಗಳಲ್ಲಿ ಬಾಲ್ಯ ವಿವಾಹ ತಡೆ ಅಧಿಕಾರಿಗಳನ್ನು ನೇಮಿಸಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಲವಾರು ಸ್ವಯಂಸೇವಾ ಸಂಘಟನೆಗಳು ಬಾಲ್ಯ ವಿವಾಹಗಳನ್ನು ತಡೆಗಟ್ಟುವ ದಿಶೆಯಲ್ಲಿ ತಮ್ಮದೇ ಆದ ರೀತಿಯಲ್ಲಿ ಧಾರ್ಮಿಕ ಸಂಘಟನೆಗಳು, ಸಮುದಾಯ ಸಂಘಟನೆಗಳು, ಜನ ಪ್ರತಿನಿಧಿಗಳು, ಸ್ಥಳೀಯ ಸರ್ಕಾರಗಳೊಡನೆ ವಕೀಲಿ ನಡೆಸುತ್ತಿವೆ.

ಹಾಗಿದ್ದೂ ಸಹ, ಬಾಲ್ಯ ವಿವಾಹಗಳು ಅತ್ಯಧಿಕವಾಗಿ ಆಗುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಅದರಲ್ಲೂ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಬಾಲ್ಯ ವಿವಾಹಗಳು ಕೌಟುಂಬಿಕ ಸಮಾರಂಭಗಳಲ್ಲಿ ಹಾಗೂ ಸಾಮೂಹಿಕವಾಗಿ ಆಗುತ್ತಿರುವುದು ಖೇದಕರವಾಗಿದೆ.

ಈ ಹಿನ್ನೆಲೆಯಲ್ಲಿ 'ಬಾಲ್ಯ ವಿವಾಹಗಳನ್ನು ನಿಲ್ಲಿಸುವ ದಿಶೆಯಲ್ಲಿ ಹೊಸ ವಿಧಾನಗಳು, ಯೋಜನೆಗಳ ಬಗ್ಗೆ ಚರ್ಚಿಸಲು' ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಬಿಜಾಪುರದಲ್ಲಿ ರಾಜ್ಯ ಮಟ್ಟದ ಸಮಾಲೋಚನಾ ಸಭೆಯನ್ನು 6 ಮತ್ತು 7 ನವೆಂಬರ್ 2008ರಂದು ಹಲವಾರು ಸ್ವಯಂಸೇವಾ ಸಂಘಟನೆಗಳ ಸಹಯೋಗದಿಂದ ಆಯೋಜಿಸಿತ್ತು.

ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ ಕುಲಪತಿಗಳಾದ ಶ್ರೀಮತಿ ಗೀತಾ ಬಾಲಿಯವರು ಉದ್ಘಾಟಿಸಿದ ಈ ಕಾರ್ಯಕ್ರಮದಲ್ಲಿ ಹಲವಾರು ಸ್ವಯಂಸೇವಾ ಸಂಸ್ಥೆಗಳ ಸದಸ್ಯರು ಮತ್ತು ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕಾರ್ಮಿಕ, ಪೊಲೀಸ್ ಇಲಾಖೆಯ ಅಧಿಕಾರಿಗಳು, ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

**ಸಲಹೆಗಳು**

ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ ಸಂಘ ಸಂಸ್ಥೆಯ ಹಾಗೂ ಸರ್ಕಾರಿ ಅಧಿಕಾರಿಗಳ ಪ್ರತಿನಿಧಿಗಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ ಗುಂಪು ಚರ್ಚೆಯನ್ನು ನಡೆಸಿ ಅವರ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆದುಕೊಳ್ಳಲಾಯಿತು.

**ಕಾರ್ಯಾಗಾರದಲ್ಲಿ ಹೊರಹೊಮ್ಮಿದ ಸಲಹೆಗಳು**

- ಮಾಧ್ಯಮ ಮತ್ತು ಇತರ ಸಾಧನಗಳ ಬಳಕೆ
  - ಜನನಿಬಿಡ ಪ್ರದೇಶಗಳಲ್ಲಿ ಭಿತ್ತಿಪತ್ರದ ಮೂಲಕ ಪ್ರಚಾರ
  - ಜಾಹಿರಾತು, ಕಿರುಚಿತ್ರ, ಬೀದಿ ನಾಟಕ ಮತ್ತು ಸ್ತಬ್ಧಚಿತ್ರ

**ಕಾನೂನುಬದ್ಧ ವಯಸ್ಸಿನ ಒಳಗೆ ಮದುವೆಯಾಗುತ್ತಿರುವ ಗಂಡು ಮತ್ತು ಹೆಣ್ಣು (%)**




ಮೂಲ : DLHS-RCH 2004



  - ಚಲನಚಿತ್ರ, ಕಿರುತೆರೆ ಕಾರ್ಯಕ್ರಮಗಳು ಮತ್ತು ಧಾರವಾಹಿಗಳು ಹಾಗು ವಾರ್ತೆಗಳು
  - ಮಕ್ಕಳ ಸಹಾಯವಾಣಿಯ ಬಳಕೆ
- ಶಿಕ್ಷಣ
  - ಶಾಲೆಗಳಲ್ಲಿ ಈ ಕುರಿತು ಚರ್ಚೆ ಮತ್ತು ಪ್ರಬಂಧ
  - ಸಮುದಾಯ ಗುಂಪುಗಳಿಗೆ ಲಿಂಗ ಸೂಕ್ಷ್ಮತೆಯ ಕುರಿತು ತಿಳುವಳಿಕೆ

**ಸುಧಾರಣೆಯ ಅವಶ್ಯಕತೆ ವಲಯಗಳು, ಕಾನೂನು ಹಾಗು ಇತರೆ**

- ಶಿಕ್ಷಣ
  - ಬಾಲ್ಯವಿವಾಹದ ದುಷ್ಪರಿಣಾಮಗಳ ಕುರಿತು ಶಾಲಾ ಪಠ್ಯದಲ್ಲಿ ಅಳವಡಿಕೆ
  - ವಸತಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಇದರ ಕುರಿತು ತಿಳುವಳಿಕೆ ಮೂಡಿಸುವುದು
  - ಪ್ರಸ್ತುತ ಬಾಲ್ಯವಿವಾಹ ಕುರಿತಾದ ಪಠ್ಯ 10ನೇ ತರಗತಿಯಲ್ಲಿದೆ ಅದನ್ನು 8ನೇ ತರಗತಿಗೆ ಅಳವಡಿಸುವುದು.
- ವಲಯಗಳು
  - ಮಕ್ಕಳ ಹಕ್ಕುಗಳ ಕೋಶಗಳನ್ನು ಹೆಚ್ಚೆಚ್ಚು ಪ್ರಾರಂಭಿಸುವುದು
  - ಸ್ತ್ರೀಶಕ್ತಿ ಗುಂಪುಗಳನ್ನು ಸಬಲೀಕರಣಗೊಳಿಸುವುದು
  - ಪಂಚಾಯಿತಿಗಳ ನಿರ್ಧಾರಗಳಲ್ಲಿ ಮಕ್ಕಳ ಭಾಗವಹಿಸುವಿಕೆ
  - ಮಕ್ಕಳ ಕಲ್ಯಾಣ ಸಮಿತಿಗಳನ್ನು ಸೇರಿಸಿಕೊಳ್ಳುವುದು
- ಕಾನೂನು
  - ಬಾಲ್ಯವಿವಾಹದ ದುಷ್ಪರಿಣಾಮಗಳ ಕುರಿತು ಶಾಲಾ ಪಠ್ಯದಲ್ಲಿ ಅಳವಡಿಕೆ
  - ವಸತಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಇದರ ಕುರಿತು ತಿಳುವಳಿಕೆ ಮೂಡಿಸುವುದು
  - ಗ್ರಾಮಪಂಚಾಯಿತಿ ಮಟ್ಟದಲ್ಲಿ ಕಡ್ಡಾಯವಾಗಿ ಮದುವೆಗಳ ನೋಂದಣಿ
  - ಬಾಲ್ಯವಿವಾಹವನ್ನು ಆಚರಿಸುವವರಿಗೆ ತೀವ್ರ ಶಿಕ್ಷೆ
  - ಯಾವುದೇ ವಿವಾಹವಾಗಬೇಕಾದರೆ ಸಾಮಾಜಿಕ ನ್ಯಾಯ ಸಮಿತಿಯ ಒಪ್ಪಿಗೆ ಪಡೆಯಬೇಕು ಇದು ಬಾಲ್ಯ ವಿವಾಹವನ್ನು ತಡೆಯಲು ನೆರವಾಗಬಹುದು.

○ ಅಂಗನವಾಡಿ ಕಾರ್ಯಕರ್ತೆ, ಸ್ಥಳೀಯ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ತಮ್ಮ ಪ್ರದೇಶದಲ್ಲಾದ ಬಾಲ್ಯವಿವಾಹದ ಕುರಿತು ಪೋಲಿಸರಿಗೆ ದೂರು ನೀಡುವ/ವರದಿ ಮಾಡುವ ಜವಾಬ್ದಾರಿಯನ್ನು ನೀಡುವುದು.

**ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು, ಧಾರ್ಮಿಕ ಮುಖಂಡರು, ರಾಜಕೀಯ ನಾಯಕರು, ಖಾಸಗಿ ವಲಯ, ಸ್ಥಳೀಯ ಸರ್ಕಾರ ಹಾಗು ಮತ್ತಿತರರ ಪಾತ್ರ**

- ಸ್ವಯಂಸೇವಾ ಸಂಸ್ಥೆಗಳು

– ಸ್ವಯಂಸೇವಾ ಸಂಸ್ಥೆಗಳು ಮತ್ತು ಇಲಾಖೆಗಳ ಬೇರು ಮಟ್ಟದ ಮಧ್ಯವರ್ತಿಕೆ

– ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗಳು ನಿಗದಿತ ಅವಧಿಗೊಮ್ಮೆ ಸಭೆ ಸೇರಿ ಸಂಬಂಧಗಳನ್ನು ಬೆಳೆಸಿಕೊಳ್ಳುವುದು.

– ಜಿಲ್ಲಾ ಮಟ್ಟದ ಸಮಿತಿ ರಚನೆಗೆ ಸ್ವಯಂಸೇವಾ ಸಂಸ್ಥೆಗಳು ಮತ್ತು ಸರ್ಕಾರ ಸಹಕರಿಸುವುದು

- ಸರ್ಕಾರ

– ಶಿಕ್ಷಣ ಇಲಾಖೆಯ ಮೂಲಕ ಮಹಿಳಾ ಸಾಕ್ಷರತೆಯನ್ನು ಉತ್ತೇಜಿಸುವುದು

– ಗ್ರಾಮಪಂಚಾಯಿತಿ ಸದಸ್ಯರಿಗೆ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವುದು.

– ಸಮಾಜ ಕಲ್ಯಾಣ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾಲಕಾಲಕ್ಕೆ ಪರಿಸ್ಥಿತಿಯನ್ನು ಅವಲೋಕಿಸುವುದು.

– ಬಾಲ್ಯವಿವಾಹವನ್ನು ತಡೆಯಲು ಶಾಲಾ ಮಟ್ಟದಲ್ಲಿ ಶಿಕ್ಷಕರ, ಶಾಲಾಭಿವೃದ್ಧಿ ಸಮಿತಿ ಸದಸ್ಯರ ಸಹಕಾರ ಮತ್ತು ಭಾಗವಹಿಸುವಿಕೆ.

– ಬಾಲ್ಯವಿವಾಹದ ಕುರಿತು ಪೋಲಿಸರಿಗೆ ತಿಳುವಳಿಕೆ

- ಧಾರ್ಮಿಕ ಮತ್ತು ರಾಜಕೀಯ ಮುಖಂಡರು

– ಹೆಚ್ಚು ಜನಸಮುದಾಯಕ್ಕೆ ಪ್ರಭಾವ ಬೀರುವ ಧಾರ್ಮಿಕ ಮುಖಂಡರನ್ನು ಬಾಲ್ಯವಿವಾಹ ತಡೆಯಲು ಭಾಗವಹಿಸುವಂತೆ ಮಾಡುವುದು.

– ಪರಿಶಿಷ್ಟ ಜಾತಿ / ಪಂಗಡಗಳ ಬಾಲಕಿಯರಿಗೆ ಸರ್ಕಾರಿ ವಸತಿ ನಿಲಯಗಳನ್ನು ಒದಗಿಸುವುದರ ಮೂಲಕ ಸಹಾಯ ಮಾಡುವುದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಮುಖಾಂತರ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**ಮುನ್ನಡೆ ಅನುಸರಣೆ**

ಕಾರ್ಯಾಗಾರದಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟುವ ಕುರಿತು ಹಲವಾರು ಸಲಹೆಗಳು ಮೂಡಿ ಬಂದಿದ್ದು, ಅವುಗಳನ್ನು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಸಿಬ್ಬಂದಿಯೊಡನೆ ಹಂಚಿಕೊಳ್ಳುವ ಆವಶ್ಯಕತೆ ಇದೆ. ಈ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ತಿಳಿಸಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇಂತಹ ಕಾರ್ಯಾಗಾರಗಳನ್ನು ನಡೆಸಿ, ಬಾಲ್ಯ ವಿವಾಹವನ್ನು ನಿಲ್ಲಿಸಲು ಸರ್ಕಾರದ ವಿವಿಧ ಇಲಾಖೆಗಳ ಸಿಬ್ಬಂದಿಯ ಜವಾಬ್ದಾರಿಯನ್ನು ಚೇತರಿಸುವ ಕುರಿತು ಯೋಜನೆಯನ್ನು ನೀಡಲಾಯಿತು. ರಾಜ್ಯ ಸರ್ಕಾರವೂ ಇದೇ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಯೋಜಿಸಿದ್ದು, ದಿನಾಂಕ 18/03/09ರಂದು ಗುಲ್ಬರ್ಗಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು. ಮುಂದೆ ನಡೆಯಲಿರುವ ಕಾರ್ಯಾಗಾರಗಳಲ್ಲಿಯೂ ನಿಗಾ ಕೇಂದ್ರವು ಭಾಗವಹಿಸಲಿದೆ.

– **ರಶ್ಮಿ ಜಿ.ಎಮ್**

# ಸುದ್ದಿಯಲ್ಲಿ ಮಕ್ಕಳು

ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಮಕ್ಕಳ ವಿಷಯಗಳನ್ನು ಮಕ್ಕಳ ಹಕ್ಕುಗಳ ನಿಗಾಕೇಂದ್ರವು ಸಂಗ್ರಹಿಸುತ್ತಿದೆ. ಹೀಗೆ ಸಂಗ್ರಹಿಸಿದ ಸುದ್ದಿ, ಲೇಖನ, ಸಂಪಾದಕೀಯವೇ ಮೊದಲಾದವುಗಳನ್ನು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಹಾಗೆ ವಿವಿಧ ವಿಭಾಗಗಳಲ್ಲಿ ಬೇರ್ಪಡಿಸಿ ನಮ್ಮ ವಿಶ್ಲೇಷಣೆ ನೀಡುತ್ತಿದ್ದೇವೆ. ಈ ಮಾಹಿತಿಯನ್ನು ಮಕ್ಕಳ ಬಗ್ಗೆ ಕಾಳಜಿ ಇರುವ ಮತ್ತು ಮಕ್ಕಳೊಡನೆ ಕೆಲಸ ಮಾಡುವವರಿಗೆ ಈಮೇಲ್ ಮೂಲಕ ಕಳುಹಿಸುತ್ತಿದ್ದೇವೆ. ಈ ಮಾಹಿತಿಯನ್ನು ಸಂಬಂಧಪಟ್ಟವರು ಮಕ್ಕಳ ಹಕ್ಕುಗಳನ್ನು ಕುರಿತು ತಮ್ಮ ವಕೀಲಿ, ಆಂದೋಲನ, ಲೇಖನ, ಭಾಷಣವೇ ಮೊದಲಾದವುಗಳಲ್ಲಿ ಬಳಸುತ್ತಿದ್ದಾರೆ.

2009ರ ಜನವರಿ ತಿಂಗಳಲ್ಲಿ ಆಯ್ದ ಪತ್ರಿಕೆಗಳಲ್ಲಿ ಮಕ್ಕಳ ಕುರಿತು ಪ್ರಕಟವಾದ ವರದಿಗಳು.

| ಕ್ರ. ಸಂ | ಮಾಧ್ಯಮದ ಹೆಸರು | ಮಕ್ಕಳ ಕುರಿತಾದ ವರದಿಗಳು |
|---|---|---|
| 1 | ಪ್ರಜಾವಾಣಿ | 6 |
| 2 | ಉದಯವಾಣಿ | 16 |
| 3 | ಕನ್ನಡಪ್ರಭ | 20 |
| 4 | ಡೆಕನ್ ಹೆರಾಲ್ಡ್(ಇ) | 27 |
| 5 | ದಿ ಟೈಮ್ಸ್ ಆಫ್ ಇಂಡಿಯಾ | 26 |
| 6 | ದಿ ಹಿಂದೂ | 13 |
| 7 | ಡೆಕನ್ ಕ್ರಾನಿಕಲ್ | 36 |
| | **ಒಟ್ಟು** | **144** |




**ವಿವರಗಳಿಗೆ ಸಂಪರ್ಕಿಸಿ :**

**childinnews@gmail.com**

# ಕಟ್ಟಡ ಕಾರ್ಮಿಕರ ಮಕ್ಕಳ ಹಿತರಕ್ಷಣೆ ಯಾರ ಹೊಣೆ?

## ರಾಜ್ಯಮಟ್ಟದ ಕಾರ್ಯಾಗಾರ

ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಹಲವಾರು ಸ್ವಯಂಸೇವಾ ಸಂಸ್ಥೆಗಳ ಸಹಯೋಗದೊಂದಿಗೆ 16 ಡಿಸೆಂಬರ್ 2009ರಂದು "ಕಟ್ಟಡ ಕಾರ್ಮಿಕರ ಮಕ್ಕಳ ರಕ್ಷಣೆ ಯಾರ ಜವಾಬ್ದಾರಿ" ಎಂಬ ರಾಜ್ಯಮಟ್ಟದ ಕಾರ್ಯಾಗಾರವನ್ನು ನಯನ ಸಭಾಂಗಣದಲ್ಲಿ ಏರ್ಪಡಿಸಿತ್ತು.

**ಹಿನ್ನೆಲೆ :** ಭಾರತದಲ್ಲಿರುವ ಒಟ್ಟು ಕಾರ್ಮಿಕರಲ್ಲಿ ಶೇಕಡಾ 92ರಷ್ಟು ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದಾರೆ. ಅವರ ಅಂದಾಜು ಒಟ್ಟು ಸಂಖ್ಯೆ 3700 ಲಕ್ಷಗಳು. ಈ ಕಾರ್ಮಿಕರಲ್ಲಿ ಬಹುತೇಕರು ಆರ್ಥಿಕ ಹಿಂಜರಿತ, ಕೆಲಸ ದೊರಕದೆ ಇರುವುದು, ಖಾಯಿಲೆ, ಅಪಘಾತ ಇವೇ ಮೊದಲಾದ ಕಾರಣಗಳಿಂದ ತಮ್ಮ ಆದಾಯಕ್ಕಿಂತಲೂ ಹೆಚ್ಚು ಖರ್ಚು ಮಾಡುತ್ತಿದ್ದಾರೆ. ಏಕೆಂದರೆ, ಈ ಕಾರ್ಮಿಕರು ಏಕರೂಪ ಅಥವಾ ಒಂದೇ ರೀತಿಯ ಗುಂಪಿಗೆ ಸೇರಿದವರಲ್ಲ. ಕರ್ನಾಟಕದಲ್ಲಿ, 1981ರಲ್ಲಿ 9.7 ದಶಲಕ್ಷ ಸಂಖ್ಯೆಯಲ್ಲಿದ್ದ ಅಸಂಘಟಿತ ಕಾರ್ಮಿಕರ ಸಂಖ್ಯೆಯು 1991ರಲ್ಲಿ 13 ದಶಲಕ್ಷಕ್ಕೆ ಮತ್ತು 2001 ರಲ್ಲಿ 17.3 ದಶಲಕ್ಷಕ್ಕೆ ಏರಿತು. ಈ ಕಾರ್ಮಿಕರಲ್ಲಿ ಹೆಚ್ಚಿನವರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಮತ್ತು ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಬಂದವರು. ವಲಸೆ ಕಾರ್ಮಿಕರ ಮಕ್ಕಳ ಸ್ಥಿತಿಯಂತೂ ಕರುಣಾಜನಕವಾದುದು. ಈ ಮಕ್ಕಳು ಪ್ರಚಲಿತದಲ್ಲಿರುವ ವ್ಯವಸ್ಥೆಗಳಿಂದ ಅವರ ಆವಶ್ಯಕತೆಗಳಾದ ಆರೋಗ್ಯ, ಶಿಕ್ಷಣ, ರಕ್ಷಣೆ, ಇತ್ಯಾದಿ ಸೇವೆಗಳನ್ನು ಸಹಜವಾಗಿ ಪಡೆಯುತ್ತಿಲ್ಲ.

ಈ ಹಿನ್ನೆಲೆಯಲ್ಲಿ, ಕಟ್ಟಡ ಕಾರ್ಮಿಕರ ಮಕ್ಕಳ ಹಕ್ಕುಗಳೇಕೆ ಊರ್ಜಿತವಾಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಗಳನ್ನು ಕಂಡುಕೊಳ್ಳಲು ಹಾಗೂ ಆ ಸೇವೆಗಳು ತಲುಪಬೇಕಾದಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಕಂಡುಕೊಳ್ಳಲು ಕಟ್ಟಡ ಕಾರ್ಮಿಕರು, ಸರ್ಕಾರಿ ಇಲಾಖೆಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ಇತರರನ್ನು ಒಂದೆಡೆ ಸೇರಿಸಿ ಸಂವಾದ ಏರ್ಪಡಿಸಲಾಗಿತ್ತು.

**ಉದ್ದೇಶಗಳು :** ಕಟ್ಟಡ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಖಾತರಿಪಡಿಸುವುದು, ಶಿಕ್ಷಣ, ರಕ್ಷಣೆ ಮತ್ತು ಪ್ರಗತಿ ಇವುಗಳ ಸಂಪೂರ್ಣ ಅಥವಾ ಸಮಗ್ರ ಪರಿಕಲ್ಪನೆಯನ್ನು ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ ಅಭಿವೃದ್ಧಿ ಪಡಿಸುವುದು, ವಲಸೆ ಕಾರ್ಮಿಕರು ಮತ್ತು ಕುಟುಂಬಗಳಿಗೆ ದೊರೆಯಬಹುದಾದ ಸಂಪನ್ಮೂಲಗಳ ಅನುಷ್ಠಾನಕ್ಕಾಗಿ ವಿತರಣಾ ಸ್ವರೂಪವನ್ನು ದಕ್ಷವಾಗಿ ಮತ್ತು ಪ್ರಾಮಾಣಿಕವಾಗಿ ಬಲವರ್ಧಿಸುವುದು ಅಥವಾ ಶಕ್ತಿಶಾಲಿಯಾಗಿಸುವುದು.

**ಪ್ರಕ್ರಿಯೆ :** ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಗಾಂಧೀವಾದಿ ಶ್ರೀ ಎಚ್.ಎಸ್.ದೊರೆಸ್ವಾಮಿಯವರು ವಲಸೆ ಬಂದು ಕಟ್ಟಡ ಕಾರ್ಮಿಕರಾಗಿರುವವರ ಸ್ಥಿತಿಯೇ ಶೋಚನೀಯವಾಗಿರುವಾಗ ಅವರ ಮಕ್ಕಳ ಸ್ಥಿತಿಯಂತೂ ಇನ್ನೂ ಕೆಟ್ಟದಾಗಿದೆ, ಆ ಮಕ್ಕಳಿಗೆ ಹಕ್ಕುಗಳಿಲ್ಲವೆ ಎಂದು ಪ್ರಶ್ನಿಸಿದರು. ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳು ಇಂತಹ ಮಕ್ಕಳನ್ನು ಹುಡುಕಿಕೊಂಡು ಹೋಗಿ ತಲುಪಬೇಕು ಎಂದೂ ಅವರು ಒತ್ತಾಯಿಸಿದರು. ಉದ್ಘಾಟನೆಯ ನಂತರ ಕಟ್ಟಡ ಕಾರ್ಮಿಕರ ಮಕ್ಕಳ ವಿಚಾರದ ವಿವಿಧ ಆಯಾಮಗಳನ್ನು ಕುರಿತು ತಜ್ಞರು ವಿಚಾರ ಮಂಡನೆ ಮಾಡಿದರು. ಕಟ್ಟಡ ಕಾರ್ಮಿಕರು ವಾಸಿಸುವ ಸ್ಥಳಗಳಲ್ಲಿನ ಅಂಗನವಾಡಿಗಳ ಪರಿಸ್ಥಿತಿ (ವಿಚಾರ ಮಂಡನೆ ಮಾಡಿದವರು – ಔಟ್‌ರೀಚ್ ಮತ್ತು ಪರಸ್ಪರ), ನೀರು ಮತ್ತು ಸ್ವಚ್ಛತಾ ಸೌಲಭ್ಯಗಳು (ಬ್ರಿಡ್ಜ್) ಮತ್ತು ಕಟ್ಟಡ ಕಾರ್ಮಿಕರ ಮಕ್ಕಳಿಗೆ ಆಗುತ್ತಿರುವ ಅನ್ಯಾಯ– ಮಕ್ಕಳ ಕಲ್ಯಾಣ ಸಮಿತಿ.



ಕೆಲವು ಕಟ್ಟಡ ಕಾರ್ಮಿಕರು ತಮ್ಮ ಅನುಭವದಿಂದ ಅವರ ಮಕ್ಕಳ ಕಷ್ಟಕಾರ್ಪಣ್ಯಗಳು, ಅವರ ಆಶಾ ಭಾವನೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಸರ್ಕಾರೇತರ ಸಂಘಗಳ ಪ್ರತಿನಿಧಿಗಳಲ್ಲದೆ ಕರ್ನಾಟಕ ಸರ್ಕಾರದ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕಾರ್ಮಿಕ ಇಲಾಖೆ ಇಲಾಖೆಗಳ ಪ್ರತಿನಿಧಿಗಳು, ಯುನಿಸೆಫ್, ಕಾರ್ಮಿಕ ಒಕ್ಕೂಟಗಳು, ಮತ್ತು ಮಾಧ್ಯಮದವರು ಭಾಗವಹಿಸಿದ್ದರು. ವಿಚಾರ ಮಂಡನೆಯ ಹಿನ್ನೆಲೆಯಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಸಂಬಂದಿಸಿದ ವಿವಿಧ ಆವಶ್ಯಕತೆಗಳ ಬಗ್ಗೆ (ಆರೋಗ್ಯ, ರಕ್ಷಣೆ, ಅಭಿವೃದ್ಧಿ) ಗುಂಪು ಚರ್ಚೆಗಳು ನಡೆದು ನಾಗರೀಕ ಸಮಾಜ ಮತ್ತು ಸರ್ಕಾರಕ್ಕೆ ನಿರ್ದಿಷ್ಟ ಸಲಹೆಗಳನ್ನು ನೀಡಲಾಯಿತು.

ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರವು ನಿಧಿ ಸಂಗ್ರಹ ಮಾಡಿದ್ದು ಅದು ನಿಜವಾದ ಅಗತ್ಯವಿರುವವರಿಗೆ ಸೇರಲೇಬೇಕೆಂದು ಕಾರ್ಯಕ್ರಮದ ಸಮಾರೋಪದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಶ್ರೀ. ಲೂಕೋಸ್ ವಲ್ಲತ್‌ರೈ ಹೇಳಿದರು. ವಲಸೆ ಕಾರ್ಮಿಕರು ಮತ್ತು ಅವರ ಮಕ್ಕಳ ಮೂಲಭೂತ ಅಗತ್ಯಗಳೇನು ಎಂಬುದರ ಕುರಿತು ಒಂದು ಅಧ್ಯಯನ ಕೈಗೊಳ್ಳಲು ಮತ್ತು ಆ ಸೌಲಭ್ಯಗಳನ್ನು ಒದಗಿಸಲು ಸಂಬಂಧಿಸಿದವರಿಗೆ ಕೆಲವು ಶಿಫಾರಸ್ಸುಗಳನ್ನು ಮಾಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಶ್ರೀ.ಲೂಕೋಸ್‌ರವರು ಕರೆ ನೀಡಿದರು. ಒಂದು ವೇಳೆ ಇಂತಹ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳು ಅಥವಾ ಕಲ್ಯಾಣ ಕೆಲಸಗಳಿಗೆ ಹಣದ ಲಭ್ಯತೆಯು ಕಡಿಮೆಯಿದ್ದಲ್ಲಿ ಕೆಲಸಗಾರರು ಮತ್ತು ಅವರ ಕುಟುಂಬಗಳ ಸೌಲಭ್ಯಕ್ಕಾಗಿ ಮಂಡಳಿಯಿಂದಲೇ ಹಣ ಲಭ್ಯವಾಗುವಂತೆ ಮಾಡಲೇಬೇಕೆಂದು ಶ್ರೀ. ಲೂಕೋಸ್‌ರವರು ಶಿಫಾರಸ್ಸು ಮಾಡಿದರು. ಇದೇ ವಿಚಾರವನ್ನು ಸ್ಪಷ್ಟೀಕರಿಸಿದ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಾದ ಡಾ.ಡಿ.ಎಸ್. ಅಶ್ವಥ್ ಅವರು ಕಟ್ಟಡ ಕಾರ್ಮಿಕರ ಮಕ್ಕಳಿಗೆ ಅಂಗನವಾಡಿ ವ್ಯವಸ್ಥೆ, ಶಿಕ್ಷಣ ಮತ್ತು ಆರೋಗ್ಯವೆ ಅಲ್ಲದೆ ರಕ್ಷಣೆಯ ಕೆಲಸಗಳೂ ಯುದ್ಧೋಪಾದಿಯಲ್ಲಿ ಆಗಬೇಕೆಂದು ಸಲಹೆ ನೀಡಿದರು.

ವಲಸೆ ಬರುವ ಕಟ್ಟಡ ಕಾರ್ಮಿಕರು ತಮ್ಮ ಮಾಲೀಕರಿಂದ ಪ್ರಮಾಣ ಪತ್ರ ಪಡೆದೇ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸದಸ್ಯತ್ವವನ್ನು ಪಡೆಯಬೇಕಿದೆ. ಇದೇ ಈ ಕಾರ್ಮಿಕರು ಕಲ್ಯಾಣ ಮಂಡಳಿಯಿಂದ ಸೇವೆಗಳನ್ನು ಪಡೆಯುವಲ್ಲಿ ತೊಂದರೆ ಆಗುತ್ತಿರುವುದು ಎಂಬ ವಿಚಾರವನ್ನು ಅನೇಕರು ತಿಳಿಸಿದರು. ಈ ಪದ್ಧತಿಯಲ್ಲಿ ಸರಳೀಕರಣವಾಗಿ, ಆದಷ್ಟೂ ಬೇಗನೆ ಸ್ವಯಂಸೇವಾ ಸಂಘಟನೆಗಳೂ ವಲಸೆ ಬಂದಿರುವ ಕಟ್ಟಡ ಕಾರ್ಮಿಕರನ್ನು ಗುರುತಿಸಿ ಪ್ರಮಾಣ ಪತ್ರ ನೀಡುವಂತೆ ಆಗಬೇಕು ಎಂಬ ಸಲಹೆ ಬಂದಿತು. ಈ ಕುರಿತು ಮಂಡಳಿಯೂ ಸಹ ಸಭೆ ನಡೆಸಿ ತೀರ್ಮಾನ ಕೈಗೊಳ್ಳುವ ಕುರಿತು ಭರವಸೆಯು ಹೊರಹೊಮ್ಮಿತು.

**ಅನುಸರಣೆ :** ಕಾರ್ಯಾಗಾರದ ನಂತರ ಇಲ್ಲಿ ಹೊರಹೊಮ್ಮಿದ ಹಲವಾರು ಸಲಹೆಗಳ ಅನುಸರಣೆಗಾಗಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀ ಗುರುದಾಸ್ ಭಟ್ ಹಾಗೂ ಉಪ ಕಾರ್ಯದರ್ಶಿಗಳಾದ ಶ್ರೀ ಹಿಟ್ಟಣಗಿ ಅವರೊಡನೆ ವಲಸೆ ಕಟ್ಟಡ ಕಾರ್ಮಿಕರನ್ನು ನೊಂದಾವಣೆ ಮಾಡುವ ಸಲುವಾಗಿ ಸ್ವಯಂಸೇವಾ ಸಂಸ್ಥೆಗಳೂ ಯಾವ ಪಾತ್ರ ವಹಿಸಬೇಕೆಂಬ ವಿಸ್ತೃತ ಚರ್ಚೆ ನಡೆಯಿತು. ಈ ಕುರಿತು ಸ್ಪಷ್ಟವಾದ ನಿರ್ದೇಶನಗಳನ್ನು ಎದುರು ನೋಡಲಾಗುತ್ತಿದೆ.

**– ನಾಗಮಣಿ ಸಿ.ಎನ್.**



# ವಿಧಾನಸೌಧದಲ್ಲಿ ಮಕ್ಕಳಿದ್ದಾರೆಯೇ?

## ಜಿಲ್ಲಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು

2008ರಲ್ಲಿ ವಿಧಾನ ಮಂಡಲದ ಅಧಿವೇಶನ ನಡೆದದ್ದು ಒಂದೇ ಬಾರಿ. ದಿನಾಂಕ 16 ಜುಲೈ 2008ರಿಂದ 5 ಆಗಸ್ಟ್ 2008ರವರೆಗೆ ಅಧಿವೇಶನದಲ್ಲಿ ಕೇಳಿ ಬಂದ ಜಿಲ್ಲಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಗಮನಿಸಿದರೆ, ಬೆಂಗಳೂರು ನಗರ ಜಿಲ್ಲೆಯ ಶಾಸಕರು ಒಟ್ಟು 81 ಪ್ರಶ್ನೆಗಳನ್ನು ಕೇಳುವುದರ ಮೂಲಕ ಮುಂಚೂಣಿಯಲ್ಲಿದ್ದಾರೆ. ನಂತರದ ಸ್ಥಾನದಲ್ಲಿ ಬೀದರ್, ತುಮಕೂರು (ತಲಾ 57 ಪ್ರಶ್ನೆಗಳು) ಹಾಗೂ ಕೋಲಾರ ಜಿಲ್ಲೆಯ (35 ಪ್ರಶ್ನೆಗಳು) ಶಾಸಕರಿದ್ದಾರೆ. ರಾಜ್ಯದ 5 ಜಿಲ್ಲೆಗಳ ಶಾಸಕರು 2008ರ ಅಧಿವೇಶನದಲ್ಲಿ ಯಾವುದೇ ಪ್ರಶ್ನೆಗಳನ್ನು ಕೇಳಿಲ್ಲ.

ಇನ್ನು ಜಿಲ್ಲಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಪರಿಗಣಿಸಿದರೆ ನಿರಾಸೆಯಾಗುತ್ತದೆ. 29 ಜಿಲ್ಲೆಗಳ ಪೈಕಿ 13 ಜಿಲ್ಲೆಗಳ ಶಾಸಕರು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿಲ್ಲ. ಮಕ್ಕಳ ಕೇಂದ್ರಿತವಾಗಿ ಕೇವಲ 6 ಪ್ರಶ್ನೆಗಳನ್ನು ಕೇಳಿದ್ದರೂ, ಬೆಂಗಳೂರು ನಗರ ಜಿಲ್ಲೆಯ ಶಾಸಕರು ಪ್ರಥಮ ಸ್ಥಾನದಲ್ಲಿದ್ದಾರೆ!

### ಜಿಲ್ಲಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು – ವಿಧಾನಸಭೆ

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ಪ್ರಶ್ನೆಗಳು | ಶ್ರೇಣಿ | ಕ್ರಮ ಸಂಖ್ಯೆ | ಜಿಲ್ಲೆ | ಮಕ್ಕಳ ಕೇಂದ್ರಿತ ಪ್ರಶ್ನೆಗಳು | ಶ್ರೇಣಿ |
|---|---|---|---|---|---|---|---|
| 1 | ದಾವಣಗೆರೆ | 0 | 1 | 1 | ದಾವಣಗೆರೆ | 0 | 1 |
| 2 | ಬಳ್ಳಾರಿ | 0 | 1 | 2 | ಬಳ್ಳಾರಿ | 0 | 1 |
| 3 | ಕೊಡಗು | 0 | 1 | 3 | ಕೊಡಗು | 0 | 1 |
| 4 | ಹಾವೇರಿ | 0 | 1 | 4 | ಹಾವೇರಿ | 0 | 1 |
| 5 | ಗದಗ | 0 | 1 | 5 | ಗದಗ | 0 | 1 |
| 6 | ನಾಮಾಂಕಿತ | 2 | 2 | 6 | ನಾಮಾಂಕಿತ | 0 | 1 |
| 7 | ರಾಮನಗರ | 2 | 2 | 7 | ರಾಮನಗರ | 0 | 1 |
| 8 | ಮೈಸೂರು | 3 | 3 | 8 | ದಕ್ಷಿಣ ಕನ್ನಡ | 0 | 1 |
| 9 | ದಕ್ಷಿಣ ಕನ್ನಡ | 4 | 4 | 9 | ಚಾಮರಾಜನಗರ | 0 | 1 |
| 10 | ಚಿಕ್ಕಬಳ್ಳಾಪುರ | 5 | 5 | 10 | ಬೆಳಗಾಂ | 0 | 1 |
| 11 | ಚಾಮರಾಜನಗರ | 5 | 5 | 11 | ಉತ್ತರ ಕನ್ನಡ | 0 | 1 |
| 12 | ಗುಲ್ಬರ್ಗಾ | 7 | 6 | 12 | ಕೊಪ್ಪಳ | 0 | 1 |
| 13 | ಬೆಳಗಾಂ | 8 | 7 | 13 | ಹಾಸನ | 0 | 1 |
| 14 | ಧಾರವಾಡ | 8 | 7 | 14 | ಮೈಸೂರು | 1 | 2 |
| 15 | ಚಿಕ್ಕಮಗಳೂರು | 10 | 8 | 15 | ಚಿಕ್ಕಬಳ್ಳಾಪುರ | 1 | 2 |
| 16 | ರಾಯಚೂರು | 10 | 8 | 16 | ಗುಲ್ಬರ್ಗಾ | 1 | 2 |
| 17 | ಉತ್ತರ ಕನ್ನಡ | 11 | 9 | 17 | ಧಾರವಾಡ | 1 | 2 |
| 18 | ಚಿತ್ರದುರ್ಗ | 12 | 10 | 18 | ಚಿಕ್ಕಮಗಳೂರು | 1 | 2 |
| 19 | ಬೆಂಗಳೂರು ಗ್ರಾ | 17 | 11 | 19 | ರಾಯಚೂರು | 1 | 2 |
| 20 | ಕೊಪ್ಪಳ | 18 | 12 | 20 | ಶಿವಮೊಗ್ಗ | 1 | 2 |
| 21 | ಶಿವಮೊಗ್ಗ | 20 | 13 | 21 | ಮಂಡ್ಯ | 1 | 2 |
| 22 | ಹಾಸನ | 21 | 14 | 22 | ಕೋಲಾರ | 1 | 2 |
| 23 | ಮಂಡ್ಯ | 28 | 15 | 23 | ಚಿತ್ರದುರ್ಗ | 2 | 3 |
| 24 | ಬಿಜಾಪುರ | 29 | 16 | 24 | ಬಾಗಲಕೋಟೆ | 2 | 3 |
| 25 | ಉಡುಪಿ | 29 | 16 | 25 | ಬಿಜಾಪುರ | 3 | 4 |
| 26 | ಬಾಗಲಕೋಟೆ | 31 | 17 | 26 | ಉಡುಪಿ | 3 | 4 |
| 27 | ಕೋಲಾರ | 35 | 18 | 27 | ಬೆಂಗಳೂರು ಗ್ರಾ | 4 | 5 |
| 28 | ತುಮಕೂರು | 57 | 19 | 28 | ತುಮಕೂರು | 4 | 5 |
| 29 | ಬೀದರ್ | 57 | 20 | 29 | ಬೀದರ್ | 4 | 5 |
| 30 | ಬೆಂಗಳೂರು ನ | 81 | 21 | 30 | ಬೆಂಗಳೂರು ನ | 6 | 6 |
| | **ಒಟ್ಟು** | **510** | | | **ಒಟ್ಟು** | **37** | |

# ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆ

ಕರ್ನಾಟಕದಲ್ಲಿನ ಮಕ್ಕಳ ಸ್ಥಿತಿ-ಗತಿಯನ್ನು ಅವಲೋಕಿಸಿ; ಅವರ ಹಕ್ಕುಗಳು ಅರ್ಥಪೂರ್ಣವಾದ ರೀತಿಯಲ್ಲಿ ಅವರಿಗೆ ದೊರಕುವಂತೆ ಮಾಡಲು ಶಾಸಕರ ವೇದಿಕೆ ಎಂಬ ಹೊಸ ಕಲ್ಪನೆಯನ್ನು ರೂಪಿಸಿ ಅದರ ಮೊದಲ ಸಭೆಯನ್ನು ದಿನಾಂಕ : 11-12-2008ರಂದು ಶಾಸಕರ ಭವನದಲ್ಲಿ ನಡೆಸಲಾಯಿತು.

**ಉದ್ದೇಶಗಳು:**

- ಕರ್ನಾಟಕದಲ್ಲಿನ ಮಕ್ಕಳ ಸ್ಥಿತಿ-ಗತಿಯನ್ನು ಚರ್ಚಿಸುವುದು.
- ಮಕ್ಕಳ ಹಕ್ಕುಗಳ ಮೇಲೆ ಜಾಗೃತಿ ಹರಡಲು ಶಾಸಕರ ಸಹಾಯ ಪಡೆಯುವುದು.
- ಆಯವ್ಯಯದಲ್ಲಿ ಮಕ್ಕಳಿಗಾಗಿ ಹೆಚ್ಚಿನ ಹಣಕಾಸಿನ ಮೀಸಲಿಗಾಗಿ ಶಾಸಕರಿಗೆ ಜವಾಬ್ದಾರಿ ಹೊರಿಸುವುದು.
- ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ವಿಚಾರಗಳನ್ನು ತಿಳಿಯಲು ವ್ಯವಸ್ಥೆ ಮಾಡುವುದು
- ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸರ್ಕಾರದ ಪ್ರಸ್ತುತ ನಿಲುವು ಮತ್ತು ಮಧ್ಯವರ್ತಿಕೆಯನ್ನು ಪರೀಕ್ಷಿಸುವುದು.
- ಮಕ್ಕಳ ಸಮಸ್ಯೆಗಳ ಪರಿಹಾರಕ್ಕಾಗಿ ಕ್ರಮಗಳನ್ನು ತಗೆದುಕೊಳ್ಳುವ ಸಲುವಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

ಮಕ್ಕಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತುವುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ಮಾಡುವುದು.

ಯುನಿಸೆಫ್ ನ ಪ್ರತಿನಿಧಿಯಾದ ಶ್ರೀ ಮಿಷಲ್ ಸೇಂಟ್-ಲಾರವರು ಭಾಗವಹಿಸಿದ್ದ ಈ ಸಭೆಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಮತ್ತು ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ಆರಂಭದಲ್ಲಿ ಕರ್ನಾಟಕದ ಮಕ್ಕಳ ಸ್ಥಿತಿಗತಿಗಳು ಕುರಿತು ಶ್ರೀ ಮಿಷಲ್ ಸೇಂಟ್ ಲಾರವರು ಸಂಕ್ಷಿಪ್ತವಾಗಿ ವಿವರಿಸಿದರು. ನಂತರ ಶಾಸಕರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

**ಕೆಲವು ಭರವಸೆಗಳು :**

- ತಾವು ಎಲ್ಲೇ ಹೋಗಲಿ ಯಾವುದೇ ವಿಚಾರದ ಬಗ್ಗೆ ಮಾತನಾಡಲಿ ತಮ್ಮೆಲ್ಲಾ ಭಾಷಣದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಹೇಳಲು ಐದು ನಿಮಿಷವನ್ನು ಮೀಸಲಾಗಿಡುತ್ತೇನೆಂದು ಶಾಸಕರಾದ ಮುಖ್ಯಮಂತ್ರಿ ಚಂದ್ರುರವರು ಭರವಸೆ ನೀಡಿದರು.
- ಮಕ್ಕಳ ಅಭಿವೃದ್ಧಿಗೆ ಶಿಕ್ಷಣ, ಆರೋಗ್ಯ ತುಂಬಾ ಮುಖ್ಯವಾದವುಗಳೆಂದು ಮಕ್ಕಳ ಸ್ನೇಹಿ ಶಾಸಕರು ಹೇಳಿದರು, ಜೊತೆಗೆ ಆ ಎರಡೂ ಬೃಹತ್ ಕ್ಷೇತ್ರಗಳಲ್ಲಿ ಅವರು ಕೆಲಸ ಮಾಡುವುದಾಗಿ ಹೇಳಿದರು.
- ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆಯ ಮುಂದಿನ ಸಭೆಗಳಲ್ಲಿ ತಾವಷ್ಟೇ ಅಲ್ಲದೆ ತಮ್ಮ ಪಕ್ಷದ ಇತರ ಸದಸ್ಯರನ್ನೂ ಕರೆತರುವ ಭರವಸೆಯನ್ನು ಶಾಸಕರು ನೀಡಿದರು.
- ಮಕ್ಕಳ ವಿಚಾರದ ಬಗ್ಗೆ ದನಿ ಎತ್ತಲು ಶಾಸಕರ ನಿಜವಾದ ಅಗತ್ಯ ಬೀಳುತ್ತದೆಯೋ ಆಗ ಅದು ಯಾವುದೇ ರೀತಿಯ ಸಂಗತಿಯಾದರೂ ತಾವು ಸಹಕರಿಸುವುದಾಗಿ ಅನೇಕ ಶಾಸಕರು ಮುಂದೆ ಬಂದಿದ್ದಾರೆ.
- ಮಕ್ಕಳ ಸ್ನೇಹಿ ಶಾಸಕರ ವೇದಿಕೆಯು ಮಕ್ಕಳ ಹಕ್ಕುಗಳ ವೇಗವರ್ಧಕ ಅಥವಾ ಪರಿವರ್ತಕವಾಗಿ ಕೆಲಸ ಮಾಡಲು ಪ್ರಯತ್ನಿಸುವ ಭರವಸೆಯನ್ನು ನೀಡಿತು.

– **ಮಂಜುನಾಥ್ ಎ. ವಿ.**

**ಈ ವೇದಿಕೆಯಲ್ಲಿ ಭಾಗವಹಿಸಿದ್ದ ಶಾಸಕರು**

ಶ್ರೀ ವೀರಣ್ಣ ಮತ್ತೀಕಟ್ಟಿ, ಸಭಾಪತಿಗಳು, ವಿಧಾನಪರಿಷತ್; ಶ್ರೀ ವಿ.ಎಸ್. ಉಗ್ರಪ್ಪ, ಪ್ರತಿಪಕ್ಷ ನಾಯಕರು, ವಿಧಾನಪರಿಷತ್; ಶ್ರೀ ಮುಖ್ಯಮಂತ್ರಿ ಚಂದ್ರು, ವಿಧಾನಪರಿಷತ್ ಸದಸ್ಯರು ; ಶ್ರೀಮತಿ ಮೋಟಮ್ಮ ವಿಧಾನಪರಿಷತ್ ಸದಸ್ಯರು ; ಶ್ರೀ. ವಿ. ಆರ್. ಸುದರ್ಶನ್, ವಿಧಾನಪರಿಷತ್ ಸದಸ್ಯರು ; ಶ್ರೀ ಗಣೇಶ್ ಕಾರ್ನಿಕ್, ವಿಧಾನಪರಿಷತ್ ಸದಸ್ಯರು ; ಶ್ರೀ ಎಸ್. ಎಂ. ಆನಂದ್, ವಿಧಾನಪರಿಷತ್ ಸದಸ್ಯರು; ಶ್ರೀ ಎಂ. ಪಿ. ನಾಡಗೌಡ, ವಿಧಾನಪರಿಷತ್ ಸದಸ್ಯರು ; ಶ್ರೀ ಸಿದ್ದು ಸವದಿ, ವಿಧಾನಸಭಾ ಸದಸ್ಯರು



# ಜಿಲ್ಲಾ ಮಟ್ಟದ ಮಕ್ಕಳ ಸಂಸತ್

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಸ್ಥಿತಿ ಹೇಗಿದೆ? ವಿವಿಧ ಪ್ರದೇಶಗಳ ಅಥವಾ ಜಿಲ್ಲೆಗಳ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಯಾವುವು? ಎಂಬಿವೇ ಮೊದಲಾದ ವಿಷಯಗಳನ್ನು ಕಂಡುಕೊಳ್ಳುವ ಸಲುವಾಗಿ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ರಾಜ್ಯದ ಹಾಸನ, ಮಂಡ್ಯ, ಗುಲ್ಬರ್ಗಾ, ಶಿವಮೊಗ್ಗ, ಕೊಡಗು ಹಾಗು ಬೀದರ್ ಜಿಲ್ಲೆಗಳಲ್ಲಿ ಮಕ್ಕಳ ಸಂಸತ್ ಸಮಾಲೋಚನೆಯನ್ನು ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳ ಸಹಕಾರದೊಡನೆ 2009ರ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಆಯೋಜಿಸಿತ್ತು.

**ಉದ್ದೇಶಗಳು:**

- ಮಕ್ಕಳಿಂದಲೇ ಮಕ್ಕಳಿಗೆ ಸಂಬಂಧಿಸಿದ ಸ್ಥಳೀಯ ವಿಚಾರ/ಸಮಸ್ಯೆಗಳನ್ನು ಗುರುತಿಸಿ, ಅದನ್ನು ಮಕ್ಕಳೇ ಪರಿಶೀಲಿಸಿ, ಬಹಿರಂಗ ಪಡಿಸುವುದು
- ಸಮಸ್ಯೆಗಳಿಗೆ ಪರಿಹಾರಗಳು ಮಕ್ಕಳಿಗೇ ತಿಳಿದಿದ್ದಲ್ಲಿ ಅವನ್ನೂ ಸಹ ತೋರಿಸುವುದು, ಸಮಸ್ಯೆಗಳನ್ನು ಪರಿಹರಿಸಲು ಉಪಾಯಗಳನ್ನು ಸಾಮೂಹಿಕವಾಗಿ ಕಂಡುಕೊಳ್ಳಲು ಪ್ರಯತ್ನಿಸುವುದು.
- ಹಲವು ಮಕ್ಕಳೊಡನೆ ಸೇರಿ ಮಾತನಾಡುವುದರ ಮೂಲಕ ಸಮಸ್ಯೆಯಿರುವುದು ತನ್ನಲ್ಲಿ ಮಾತ್ರ, ತಾನು ದೂರ, ಒಂಟಿ ಎಂಬ ಭಾವನೆ ಮಕ್ಕಳಲ್ಲಿ ಬಾರದಂತೆ ಮಾಡಿ ಮಕ್ಕಳಲ್ಲಿ ಧನಾತ್ಮಕವಾದ ಭಾವನೆ, ಚಿಂತನೆಗಳನ್ನು ಮೂಡಿಸುವುದು
- ಸಮುದಾಯದ ಮಕ್ಕಳೆಲ್ಲರ ಪರವಾಗಿ ಮಾತನಾಡುವ ಮೂಲಕ, ರಾಜಕೀಯ ವಿಚಾರಗಳ ಬಗ್ಗೆ ಮಕ್ಕಳಲ್ಲಿ ಮನೋಸ್ಥೈರ್ಯ ಮೂಡಿಸುವುದು
- ಮಕ್ಕಳಿಗೆ ಜನಸಮುದಾಯಗಳ ಸಮಸ್ಯೆಗಳು, ರಾಜಕೀಯ, ಆಡಳಿತ ಹಾಗೂ ನಿರ್ವಹಣೆ ಕುರಿತು ಅವರಿಗರಿವಾಗುವಂತೆ ಮಾಹಿತಿ ನೀಡುವುದು

**ಶಾಲೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಕ್ಕಳಿಂದ ಮೂಡಿಬಂದ ಸಮಸ್ಯೆಗಳು :**

- ಶಾಲೆಗಳಲ್ಲಿ ಕೇವಲ ಶಿಕ್ಷಕರಿಗೆ ಮಾತ್ರ ಶೌಚಾಲಯ ವ್ಯವಸ್ಥೆ ಇದೆ, ಮಕ್ಕಳಿಗಿಲ್ಲ.
- ನಗರ ಪಟ್ಟಣಗಳ ಶಾಲೆಯಲ್ಲಿ ಕಂಪ್ಯೂಟರ್ ಇದೆ. ಆದರೆ ಹಳ್ಳಿ ಶಾಲೆಯಲ್ಲಿ ಕಂಪ್ಯೂಟರ್ ಇಲ್ಲ.
- ಶಾಲೆಗಳ ಶಿಕ್ಷಕರ ಅನುಚಿತ ವರ್ತನೆ ಹಾಗೂ ಶಿಕ್ಷಕರು ಮದ್ಯಪಾನ ಮಾಡಿ ಶಾಲೆಗಳಿಗೆ ಹಾಜರಾಗುವುದು.
- ಪರೀಕ್ಷೆ ಸಮಯದಲ್ಲಿ ವಿದ್ಯುತ್ತಿನ ಸಮಸ್ಯೆ.
- ಶಾಲೆ ದೂರದಲ್ಲಿರುವುದರಿಂದ ಹೋಗಲು ಕಷ್ಟವಾಗುತ್ತದೆ.
- ಮಳೆ ಬಂದರೆ ಶಾಲೆಯಲ್ಲಿ ನೀರು ಸೋರುತ್ತದೆ ಮತ್ತು ಅನೇಕ ಶಾಲೆಗಳ ಕೊಠಡಿಗಳಲ್ಲಿ ಕಿಟಕಿಗಳೇ ಇಲ್ಲ.

**ಮಕ್ಕಳಿಂದ ಮೂಡಿಬಂದ ಸಲಹೆ :**

ಮಕ್ಕಳ ಸಂಸತ್ ಕಾರ್ಯಾಗಾರವನ್ನು ಪ್ರತಿಯೊಂದು ಜಿಲ್ಲೆಯಲ್ಲಿ ಕಾಲಕಾಲಕ್ಕೆ ಮಾಡುತ್ತಿದ್ದರೆ, ಅಲ್ಲಿರುವ ಮಕ್ಕಳ ಸಮಸ್ಯೆಯ ಬಗ್ಗೆ ಗಮನ ಕೊಟ್ಟಂತಾಗುತ್ತದೆ. ಮಕ್ಕಳಿಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿರುವುದರಿಂದ ಅವರು ಅವರ ಅಭಿಪ್ರಾಯವನ್ನು ಹೇಳಿಕೊಳ್ಳಲು ಸಾಧ್ಯವಾಗುತ್ತದೆ.




# ಮಕ್ಕಳು ಮತ್ತು ಆಯವ್ಯಯ

ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಒಟ್ಟು ಆಯವ್ಯಯದಲ್ಲಿ ಮಕ್ಕಳಿಗಾಗಿ ಮೀಸಲಿಟ್ಟ ಆಯವ್ಯಯವನ್ನು ಗಮನಿಸಿದರೆ, ಸರಾಸರಿ ಶೇಕಡಾ 13.78ರಷ್ಟು ಹಣವನ್ನು ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಮೀಸಲಿಡಲಾಗಿದೆ.

ಕರ್ನಾಟಕ ರಾಜ್ಯದ ಈ ವರ್ಷದ ಆಯವ್ಯಯವನ್ನು ಮಕ್ಕಳ ದೃಷ್ಟಿಕೋನದಲ್ಲಿ ಹೋಲಿಸಿ ನೋಡಿದಾಗ ಕಂಡುಬರುವುದು ಹಿಂದಿನ 2007–08 ಹಾಗೂ 2008–9ಕ್ಕಿಂತಲೂ ಈ ವರ್ಷ ಶಿಕ್ಷಣ, ಅಭಿವೃದ್ಧಿ, ಆರೋಗ್ಯ ಮತ್ತು ರಕ್ಷಣೆ ಇವೇ ಮೊದಲಾದವುಗಳಿಗೆ ಮೀಸಲಿಟ್ಟ ಹಣದ ಶೇಕಡಾ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದು ತುಸು ಸಮಾಧಾನ ತರುವ ವಿಷಯವಾಗಿದೆ.

ಇದಕ್ಕೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ಈ ವರ್ಷ ಮಕ್ಕಳಿಗೆ ಸಂಬಂಧಿಸಿದ ಹಲವಾರು ಹೊಸ ಯೋಜನೆಗಳಾದ ಮಕ್ಕಳ ವಿಶೇಷ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಅಲ್ಲದೆ ಭಾಗ್ಯಲಕ್ಷ್ಮಿ ಯೋಜನೆಗೆ ಮೀಸಲಿಟ್ಟ ಹಣವನ್ನು ಈ ವರ್ಷ 266 ಕೋಟಿಯಿಂದ 354 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಹೀಗಾಗಿ ಕಳೆದ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಮಕ್ಕಳಿಗೆ ಮೀಸಲಿಟ್ಟ ಹಣದ ಪ್ರಮಾಣದಲ್ಲಿ ಏರಿಕೆಯಾಗಿದೆ.

ಮಕ್ಕಳಿಗಾಗಿ ಮೀಸಲಿಟ್ಟ ಹಣದಲ್ಲಿ ವಿಭಾಗಾವಾರು ಆಯವ್ಯಯ ಹಂಚಿಕೆಯು ಈ ರೀತಿಯಾಗಿವೆ.




**2007–08 ರಿಂದ 2009–10ರ ಮೂರು ವರ್ಷಗಳ ಅವಧಿಯಲ್ಲಿ ಮಕ್ಕಳಿಗಾಗಿ ಸರಾಸರಿ ಶೇ. 13.78ರಷ್ಟು ಹಣವನ್ನು ಮೀಸಲಿಡಲಾಗಿದೆ. ಅಂದರೆ ಪ್ರತಿ 100 ರೂಪಾಯಿಗಳ ಒಟ್ಟು ಆಯವ್ಯಯದಲ್ಲಿ 13.78 ರೂಪಾಯಿಗಳನ್ನು ಮಕ್ಕಳ ಉಳಿವು, ರಕ್ಷಣೆ, ಅಭಿವೃದ್ಧಿ, ಶಿಕ್ಷಣ ಇವೇ ಮೊದಲಾದವುಗಳಿಗೆ ಸಂಬಂಧಿಸಿದ ಯೋಜನೆಗಳಿಗೆ ಮೀಸಲಿಡಲಾಗಿದೆ.**



### ಮಕ್ಕಳ ಸಂಖ್ಯೆ

2001ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆ 5.28 ಕೋಟಿಗಳು. ಇವರಲ್ಲಿ 2.68 ಕೋಟಿ ಗಂಡಸರು ಮತ್ತು 2.59 ಕೋಟಿ ಹೆಂಗಸರಿದ್ದಾರೆ. ಈ ಒಟ್ಟಾರೆ ಜನಸಂಖ್ಯೆಯಲ್ಲಿ 18 ವರ್ಷದೊಳಗಿನ ಮಕ್ಕಳ ಪ್ರಮಾಣ 40% ಅಂದರೆ, ಸರಿ ಸುಮಾರು 2 ಕೋಟಿ ಸಂಖ್ಯೆ. ನಗರಗಳಲ್ಲಿ 0.77 ಕೋಟಿ ಮಕ್ಕಳಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ಈ ಸಂಖ್ಯೆ 1.13 ಕೋಟಿ.

| ಮಕ್ಕಳ ವಯೋಮಾನ | ಗ್ರಾಮೀಣ | | ನಗರ | | ಒಟ್ಟು | | ಒಟ್ಟು | ಒಟ್ಟು ಜನ ಸಂಖ್ಯೆಯ % |
|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | | |
| 0–6 ವರ್ಷ | 892601 | 840554 | 1657689 | 1561030 | 2550290 | 2401584 | 71,82,100 | 13.25 |
| 6–11 ವರ್ಷ | 2044076 | 1976877 | 934120 | 892735 | 2978196 | 2869612 | 58,47,808 | 10.98 |
| 11–14 ವರ್ಷ | 1326245 | 1268406 | 611940 | 580980 | 1938185 | 1849386 | 37,87,571 | 7.0 |
| 14–18 ವರ್ಷ | 1575250 | 1410936 | 794667 | 739571 | 2369877 | 2150507 | 45,20,384 | 8.52 |

ಮಕ್ಕಳ ಒಟ್ಟಾರೆ ಆಯವ್ಯಯದಲ್ಲಿ ಏರಿಕೆಯಾಗಿದ್ದರೂ ಸಹ, ಮಕ್ಕಳ ಆಯವ್ಯಯದಲ್ಲಿ ವಿಭಾಗಾವಾರು ಆಯವ್ಯಯವನ್ನು ಪರಿಗಣಿಸಿದರೆ, ಮಕ್ಕಳ ಅಭಿವೃದ್ಧಿಯನ್ನು ಹೊರತುಪಡಿಸಿದರೆ ಬೇರೆಲ್ಲಾ ವಿಭಾಗಗಳಲ್ಲಿ ಮಕ್ಕಳಿಗಾಗಿ ಮೀಸಲಿಟ್ಟ ಹಣದಲ್ಲಿ ಕಳೆದ ವರ್ಷಗಳಿಗಿಂತ ಈ ಬಾರಿ ಕಡಿಮೆಯಾಗಿದೆ.

**ಮುಂದಿನ ಆಯವ್ಯಯದಲ್ಲಿ ಇವುಗಳನ್ನು ನಿರೀಕ್ಷಿಸಬಹುದೇ?**

1) ಮಕ್ಕಳ ಉಳಿವು ಮತ್ತು ಆರೋಗ್ಯದ ಸ್ಥಿತಿ ಸುಧಾರಿಸಲು ಹೆರಿಗೆ ಮತ್ತು ಶಿಶು ಆರೋಗ್ಯ, ರೋಗನಿರೋಧಕ ಇವೆ ಮೊದಲಾದ ಲೆಕ್ಕಶೀರ್ಷಿಕೆಗಳಿಗೆ ಹೆಚ್ಚಿನ ಅನುದಾನವನ್ನು ನೀಡಬೇಕು ಮತ್ತು ಇವುಗಳ ಜಾರಿಯಲ್ಲಿರುವ ತೊಡಕುಗಳ ನಿವಾರಣೆಗೆ ಸರ್ಕಾರ ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಬೇಕು.
2) ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ಸಾರ್ವತ್ರಿಕರಣಗೊಳಿಸಬೇಕು (ಇದು ಕೇಂದ್ರ ಸರ್ಕಾರದ ಯೋಜನೆಯಾದ್ದರಿಂದ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಮೂಲಕ ಇದನ್ನು ಸಾಧಿಸಲು ಪ್ರಯತ್ನಿಸಬೇಕು).
3) ಪ್ರತಿಯೊಂದು ವಸತಿ ಪ್ರದೇಶದಲ್ಲೂ ಅಂಗನವಾಡಿಗಳನ್ನು ಸ್ಥಾಪಿಸಲು ಹೆಚ್ಚು ಹಣ ನಿಗದಿಮಾಡಬೇಕು.
4) ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣವನ್ನು ಸಾಧಿಸುವ ದಿಸೆಯಲ್ಲಿ, ಈ ಕೆಳಗಿನ ಕೊರತೆಗಳನ್ನು ನಿವಾರಿಸಲು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು.
   - 2217 ಪ್ರಾಥಮಿಕ ಶಾಲೆಗಳಿಗೆ ಅವಶ್ಯಕವಾಗಿರುವ ಸ್ವಂತ ಕಟ್ಟಡ ನಿರ್ಮಾಣಕ್ಕೆ ;
   - 1750 ಪ್ರಾಥಮಿಕ ಶಾಲೆಗಳಿಗೆ ಅವಶ್ಯಕವಾಗಿರುವ ಹೆಚ್ಚಿನ ದುರಸ್ಥಿಗಳಿಗೆ ;
   - ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕೊರತೆಯಿರುವ ಶಿಕ್ಷಕರ ಹುದ್ದೆಗಳನ್ನು ತುಂಬುವ ಸಲುವಾಗಿ;
   - ರಾಜ್ಯದ ಸಾವಿರಾರು ಶಾಲೆಗಳಲ್ಲಿ ಕೊರತೆಯಿರುವ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಹೆಣ್ಣುಮಕ್ಕಳ ಶೌಚಾಲಯ, ಆಟದ ಮೈದಾನ, ವಿದ್ಯುಚ್ಛಕ್ತಿ, ಗ್ರಂಥಾಲಯ ಇವೇ ಮೊದಲಾದ ಕೊರತೆಗಳನ್ನು ನೀಗಿಸಲು.
5) ಮಕ್ಕಳ ರಕ್ಷಣೆಯು ಇಂದಿಗೂ ಸಹ ಅತ್ಯಂತ ನಿರ್ಲಕ್ಷಿತವಾಗಿದೆ
   - ಮಕ್ಕಳ ರಕ್ಷಣೆಯ ಯೋಜನೆಗಳಿಗೆ ಹೆಚ್ಚಿನ ಅನುದಾನವನ್ನು ನೀಡಬೇಕು ಮತ್ತು ಈ ಯೋಜನೆಗಳ ಜಾರಿ ಮತ್ತು ಉಸ್ತುವಾರಿಗೂ ಸಹ ಪ್ರತ್ಯೇಕ ಅನುದಾನವನ್ನು ನೀಡಬೇಕು.
   - ನಿರಾಶ್ರಿತ ಮಕ್ಕಳು, ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳು, ಬೀದಿ ಮಕ್ಕಳು, ವಲಸೆ ಕುಟುಂಬಗಳು ಮಕ್ಕಳು ಮೊದಲಾದವರ ರಕ್ಷಣೆಗೆ ಪ್ರತ್ಯೇಕವಾಗಿ ಅನುದಾನವನ್ನು ಬಿಡುಗಡೆ ಮಾಡಬೇಕು.
6) ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಯೋಜನೆಗಳಿಗೆ ಇನ್ನೂ ಹೆಚ್ಚಿನ ಅನುದಾನವನ್ನು ನೀಡುವುದರ ಜೊತೆಗೆ ಅವುಗಳ ಜಾರಿಯನ್ನು ಖಾತ್ರಿಗೊಳಿಸಬೇಕು.
7) ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಯೋಜನೆಗಳ ಜಾರಿಯನ್ನು ಖಾತ್ರಿಗೊಳಿಸಲು ಸಾರ್ವಜನಿಕ ಲೆಕ್ಕಪತ್ರ ತಪಾಸಣೆಯನ್ನು (social audit) ಜಾರಿಗೆ ತರಬೇಕು.
8) ಎಚ್.ಐ.ವಿ./ಏಡ್ಸ್‌ನಿಂದಾಗಿ ತಬ್ಬಲಿಗಳಾದ ಮಕ್ಕಳಿಗಾಗಿ ವಸತಿ ನಿಲಯ ಸೌಲಭ್ಯ ಒದಗಿಸುವ ಕಲ್ಪನೆ ಒಳ್ಳೆಯದೆ. ಆದರೆ, ಇಂದಿನ ಅತ್ಯಂತ ದೊಡ್ಡ ಆವಶ್ಯಕತೆ, ಏಡ್ಸ್ ಮತ್ತು ಎಚ್.ಐ.ವಿ. ಪೀಡಿತ ಮಕ್ಕಳಿಗೆ ಬೇಕಿರುವ ಆಶ್ರಯಗಳು. ರಾಜ್ಯದಲ್ಲಿ ಸಾವಿರಾರು ಮಕ್ಕಳು ಏಡ್ಸ್/ಎಚ್.ಐ.ವಿ. ಸೋಂಕಿಗೆ ವಿವಿಧ ಕಾರಣಗಳಿಂದ ತುತ್ತಾಗಿದ್ದು, ಅವರಿಗಾಗಿ ವಿಶೇಷ ನಿಲಯಗಳನ್ನು ಸ್ಥಾಪಿಸಲು ಹಣ ನಿಗಧಿ ಮಾಡುವ ಆವಶ್ಯಕತೆ ಇಂದು ಎದ್ದು ಕಾಣುತ್ತಿದೆ.

**ಮಕ್ಕಳ ಆಯವ್ಯಯದಲ್ಲಿ ಆರೋಗ್ಯ, ಶಿಕ್ಷಣ, ಅಭಿವೃದ್ಧಿ ಮತ್ತು ರಕ್ಷಣೆಯ ಅನುಪಾತ** (ರೂ. ಲಕ್ಷಗಳಲ್ಲಿ)

| | ಆರೋಗ್ಯ | % | ಅಭಿವೃದ್ಧಿ | % | ಶಿಕ್ಷಣ | % | ರಕ್ಷಣೆ | % | ಒಟ್ಟು ಮಕ್ಕಳ ಆಯವ್ಯಯ |
|---|---|---|---|---|---|---|---|---|---|
| 2007–08 | 1895 | 0.32 | 39089 | 6.66 | 543906 | 92.65 | 2139 | 0.36 | 587029 |
| 2008–09 | 5333 | 0.68 | 53241 | 6.76 | 726082 | 92.22 | 2654 | 0.34 | 787310 |
| 2009–10 | 2764 | 0.33 | 99156 | 11.71 | 741605 | 87.62 | 2894 | 0.34 | 846419 |

ಮಕ್ಕಳಿಗಾಗಿ ಮೀಸಲಿಟ್ಟ ಹಣದಲ್ಲಿ ಏರಿಕೆಯಾಗಿದೆ. ಆದರೆ, ಆಯವ್ಯಯವನ್ನು ಮಕ್ಕಳ ವಿವಿಧ ವಿಭಾಗಗಳಲ್ಲಿ ಪರಿಗಣಿಸಿದರೆ ಮಕ್ಕಳ ಆರೋಗ್ಯ, ಶಿಕ್ಷಣ ಮತ್ತು ರಕ್ಷಣೆಗಾಗಿ ಮೀಸಲಿಟ್ಟ ಹಣದ ಪ್ರಮಾಣದಲ್ಲಿ ಕಳೆದ ವರ್ಷಗಳಿಗೆ ಹೋಲಿಸಿದರೆ ಖೋತಾ ಕಂಡುಬರುತ್ತದೆ.

# ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳು

**ಪೀಠಿಕೆ :–** ಗ್ರಾಮ ಪಂಚಾಯ್ತಿಗಳು ಸ್ಥಳೀಯ ಸರ್ಕಾರಗಳಿದ್ದಂತೆ. ಸ್ಥಳೀಯ ಸರ್ಕಾರಗಳು ಕೇವಲ ಮತದಾರರನ್ನು ಕೇಂದ್ರೀಕರಿಸಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿವೆ. ಪಂಚಾಯಿತಿಗಳು ಗ್ರಾಮದ ಎಲ್ಲಾ ರೀತಿಯ ಮಾಹಿತಿಯನ್ನು ಹೊಂದಿರುತ್ತವೆ. ಆದರೆ ಮಕ್ಕಳ ಮಾಹಿತಿಯನ್ನು ಕೇಳಿದರೆ ಶಾಲೆಯಲ್ಲಿ. ಅಂಗನವಾಡಿ ಕೇಂದ್ರಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿಚಾರಿಸಲು ತಿಳಿಸುತ್ತಾರೆ. ಪಂಚಾಯ್ತಿಗಳು ಮಕ್ಕಳಿಗಾಗಿ ನಿರ್ದಿಷ್ಟವಾಗಿ ಯಾವುದೇ ಕಾರ್ಯಕ್ರಮ ಅಥವಾ ಯೋಜನೆಗಳನ್ನು ಹೊಂದಿಲ್ಲವೆಂದೇ ಹೇಳಬಹುದು.

ಈ ನಿಟ್ಟಿನಲ್ಲಿ ಪಂಚಾಯ್ತಿ ಪ್ರತಿನಿಧಿಗಳ ಅಭಿವೃದ್ಧಿಯ ದೃಷ್ಟಿಕೋನ ಬದಲಾಗಬೇಕಿದೆ. ಪಂಚಾಯ್ತಿ ಪ್ರತಿನಿಧಿಗಳು ಶೌಚಾಲಯ, ಕುಡಿಯುವ ನೀರು, ರಸ್ತೆ, ಚರಂಡಿ, ವಿದ್ಯುತ್ ದೀಪಗಳನ್ನು ಅಭಿವೃದ್ಧಿಯ ಮಾನದಂಡವಾಗಿ ಇಟ್ಟುಕೊಂಡಿವೆ. ಅಂದರೆ ಕೇವಲ ಭೌತಿಕ ವಸ್ತುಗಳ ಅಭಿವೃದ್ಧಿಗೆ ಹೆಚ್ಚು ಗಮನ ಕೊಡುತ್ತಿವೆಯೇ ಹೊರತು ಅಭಿವೃದ್ಧಿ ಮಾನದಂಡಗಳಲ್ಲಿ ಮಕ್ಕಳು ಕಾಣೆಯಾಗಿದ್ದಾರೆ. ಮಕ್ಕಳ ಮಾಹಿತಿಯನ್ನು ಸಂಗ್ರಹಿಸಿ ಪ್ರತಿ ವರ್ಷ ವಿಶ್ಲೇಷಿಸಿ, ಕೊರತೆ ಮತ್ತು ಸಮಸ್ಯೆಗಳನ್ನು ಹೋಗಲಾಡಿಸಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯನ್ನು ಪಂಚಾಯ್ತಿಗಳು ಗಮನಿಸಬೇಕು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ ಗ್ರಾಮ ಪಂಚಾಯ್ತಿಗಳ ಪ್ರಾಥಮಿಕ ಜವಾಬ್ದಾರಿಯಾಗಬೇಕು. ಹಾಗಾದರೆ ಮಾತ್ರ ಪಂಚಾಯ್ತಿಗಳು ಮಕ್ಕಳ ಸ್ನೇಹಿಯಾಗಲು ಸಾಧ್ಯ.

**ಮಕ್ಕಳ ಗ್ರಾಮಸಭೆಗಳ ಆಶಯ:–** ಪಂಚಾಯ್ತಿಗಳು ಮಕ್ಕಳ ಬೇಡಿಕೆ ಮತ್ತು ವ್ಯವಸ್ಥೆಗಳ ಬಗ್ಗೆ ಗಮನಿಸಬೇಕಿದೆ. ಇಂದಿನ ಮಕ್ಕಳು ಇಂದಿನ ಪ್ರಜೆಗಳು. ಹೀಗೆ ಮಕ್ಕಳನ್ನೂ ಪ್ರಜೆಗಳೆಂದು ಪರಿಗಣಿಸಿ ತಮ್ಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಮಕ್ಕಳ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಂಡು ಮಕ್ಕಳಿಗಾಗಿ ಯೋಜಿಸುವ, ಯೋಚಿಸುವ ವಯಸ್ಕರ ಸಭೆಗಳು ಮಕ್ಕಲ ಹಕ್ಕುಗಳ ವಿಶೇಷ ಗ್ರಾಮ ಸಭೆಗಳು. ಈ ಸಭೆಗಳಲ್ಲಿ ಮಕ್ಕಳಿಗೂ ಭಾಗವಹಿಸಿ, ತಮ್ಮ ಅಭಿಪ್ರಾಯಗಳನ್ನು ರೂಪಿಸಿ ಮಂಡಿಸುವ ಅವಕಾಶಗಳಿವೆ. ಇಂತಹ ಸಭೆಗಳನ್ನು ಪಂಚಾಯ್ತಿಯೇ ಆಯೋಜಿಸಬೇಕು. ಈ ಸಭೆಗಳಲ್ಲಿ ಪಂಚಾಯ್ತಿಗಳು ಮಕ್ಕಳ ಕುರಿತಾದ ಮಾಹಿತಿಗಳನ್ನು (0–18 ವರ್ಷದ ಒಳಗಿನ ಎಲ್ಲಾ ಮಕ್ಕಳು) ಮಂಡಿಸಬೇಕು ಪ್ರತಿ ಮಗುವಿನ ಜನನ, ಶಿಕ್ಷಣ, ರಕ್ಷಣೆ, ಅಭಿವೃದ್ಧಿ, ಭಾಗವಹಿಸುವಿಕೆ ಬಗ್ಗೆ ಕಾರ್ಯೋನ್ಮುಖವಾಗಬೇಕು. ಸಂಬಂಧಿಸಿದ ಪ್ರತಿಯೊಂದು ಇಲಾಖೆಯ ಪ್ರತಿನಿಧಿಗಳು ಅಲ್ಲಿ ಹಾಜರಿದ್ದು ಮಕ್ಕಳ ಪರಿಸ್ಥಿತಿಗಳ ಬಗ್ಗೆ ವಿವರಣೆಗಳನ್ನು ನೀಡಬೇಕು.

**ಮಕ್ಕಳ ಗ್ರಾಮಸಭೆಗಳು ಪರಿಣಾಮಗಳು :–**ಮಕ್ಕಳ ಗ್ರಾಮಸಭೆಗಳಿಂದ ಅನೇಕ ರೀತಿಯ ಬದಲಾವಣೆಗಳನ್ನು ನಾವು ಗಮನಿಸಿದ್ದೇವೆ. ಕುಡಿಯುವ ನೀರಿನ ಸೌಕರ್ಯಗಳು, ಶೌಚಾಲಯ, ಗ್ರಂಥಾಲಯ ಸೌಲಭ್ಯ, ಶಾಲೆಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲು ಪಂಚಾಯ್ತಿಗಳು ಆಂದೋಲನ ಆರಂಭಿಸಿವೆ, ಪಂಚಾಯ್ತಿಯ ಅನುದಾನಗಳಲ್ಲಿ ಮಕ್ಕಳಿಗಾಗಿ ಕಾರ್ಯಕ್ರಮಗಳನ್ನು ಸೇರ್ಪಡಿಸುತ್ತಿದ್ದಾರೆ. ಮಕ್ಕಳ ಜನನ ದಾಖಲಾತಿಯನ್ನು ಕಡ್ಡಾಯವಾಗಿ ಮಾಡಿಸುತ್ತಿದ್ದಾರೆ. ವರ್ಗ 1 ರಲ್ಲಿ ಪ.ಜಾ/ಪ.ಪಂ.ದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಸಹಾಯಧನ ನೀಡುತ್ತಿದ್ದಾರೆ. ಮಕ್ಕಳ ಕುರಿತು ಮಾಹಿತಿಯನ್ನು ಪಂಚಾಯ್ತಿಗಳು ಸಂಗ್ರಹಿಸುತ್ತಿವೆ. ಅಂಗವಿಕಲ ಮಕ್ಕಳಿಗೆ ಸಲಕರಣೆ ಸೌಲಭ್ಯಗಳನ್ನು ನೀಡುತ್ತಿವೆ. ಶಿಕ್ಷಕರ ಕೊರತೆ, ಕಟ್ಟಡ, ಬಿಸಿಯೂಟ, ಅಂಗನವಾಡಿ ಕೇಂದ್ರಗಳ ದುರಸ್ತಿಗೆ ಪರಿಹಾರಗಳನ್ನು ಪಂಚಾಯ್ತಿಗಳು ಕಂಡುಕೊಳ್ಳುತ್ತಿವೆ. ಮಕ್ಕಳ ಗ್ರಾಮಸಭೆಗಳಿಂದ ಪಂಚಾಯ್ತಿಗಳು ಮಕ್ಕಳ ಸ್ನೇಹಿಯತ್ತ ಹೆಜ್ಜೆ ಹಾಕುತ್ತಿವೆ ಎಂದರೆ ತಪ್ಪಾಗಲಾರದು

**ಬಳ್ಳಾರಿ ವರದಿ :** ಬಳ್ಳಾರಿ ಜಿಲ್ಲೆಯಲ್ಲಿ ಏಳು ತಾಲೂಕುಗಳಿವೆ. ಇಲ್ಲಿನ ಎರಡು ತಾಲೂಕುಗಳಲ್ಲಿ (ಹೊಸಪೇಟೆ, ಹೂವಿನ ಹಡಗಲಿ) ಮಕ್ಕಳ ಹಕ್ಕುಗಳ ಗ್ರಾಮಸಭೆಗಳನ್ನು ನಡೆದಿರುವ ಮಾಹಿತಿ ಇದೆ. ಇಂತಹ ನಿರ್ದಿಷ್ಟ ಗ್ರಾಮಸಭೆಗಳಿಗೆ ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳಾಗಿ ನಾವೇ ಖುದ್ದು ಹಾಜರಾಗಿ ಅನುಭವ ಪಡೆದು ಕೊಂಡಿದ್ದೇವೆ. ಹೊಸಪೇಟೆಯ 23 ಗ್ರಾಮ ಪಂಚಾಯ್ತಿಯ ಪೈಕಿ 18 ಗ್ರಾಮಪಂಚಾಯ್ತಿಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮಸಭೆಗಳು ನಡೆದಿದೆ. ಹಡಗಲಿಯಲ್ಲಿ ಮಕ್ಕಳ ಗ್ರಾಮಸಭೆಗಳು ನಡೆದಿರುವ ಬಗ್ಗೆ ಪತ್ರಿಕೆಗಳಲ್ಲಿ ನೋಡಿದ್ದೇವೆ ನಿಖರವಾಗಿ ತಿಳಿದಿಲ್ಲ. ರಾಜ್ಯದಲ್ಲಿ 2006ರಲ್ಲಿ ಮೊಟ್ಟಮೊದಲಬಾರಿಗೆ ಬಳ್ಳಾರಿ ಜಿಲ್ಲೆಯಲ್ಲಿ ಮಕ್ಕಳ ಗ್ರಾಮಸಭೆಗಳನ್ನು ನಡೆಸುವ ಪ್ರಯತ್ನ ನಡೆಯಿತು. ಆದರೂ, ಜಿಲ್ಲೆಯ 189 ಗ್ರಾಮ ಪಂಚಾಯ್ತಿಗಳ ಪೈಕಿ ಕೆಲವೇ ಪಂಚಾಯ್ತಿಗಳಲ್ಲಿ ಮಕ್ಕಳ ಗ್ರಾಮ ಸಭೆಗಳು ನಡೆದಿರುವುದು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇನ್ನೂ ಮಕ್ಕಳತ್ತ ಗಮನ ಹರಿಸುತ್ತಿಲ್ಲವೆಂಬುದು ಕಂಡುಬರುತ್ತಿದೆ.



ಸಣಾಪುರ ಗ್ರಾಮ ಪಂಚಾಯ್ತಿಯಲ್ಲಿ ಮಕ್ಕಳ ಗ್ರಾಮಸಭೆ ನಡೆದಾಗ ಮಕ್ಕಳು, ಪಂಚಾಯ್ತಿ ಪ್ರತಿನಿಧಿಗಳು, ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮದ ಹಿರಿಯರು ಭಾಗವಹಿಸಿದ್ದರು. ಕುಡಿಯುವ ನೀರು, ಶೌಚಾಲಯ, ಕೊಠಡಿ ಸಮಸ್ಯೆ, ಬಸ್ ಸೌಕರ್ಯಗಳ ಬಗ್ಗೆ ಹೆಚ್ಚು ಪ್ರಶ್ನೆಗಳನ್ನು ಮಕ್ಕಳು ಕೇಳಿದರು. ಪಂಚಾಯ್ತಿ ತಕ್ಷಣ ಸ್ಪಂದಿಸಿ ಬಸ್ಸಿನ ಸೌಕರ್ಯಕ್ಕೆ ಸಂಬಂಧಿಸಿದ ಇಲಾಖೆಗೆ ಪತ್ರ ಬರೆದು ಪರಿಹಾರ ಕಂಡುಕೊಂಡಿದ್ದಾರೆ. ಸರ್ವಶಿಕ್ಷಾ ಅಭಿಯಾನ ಯೋಜನೆಯಡಿಯಲ್ಲಿ ಶೌಚಾಲಯವನ್ನು ನಿರ್ಮಿಸುತ್ತಿದ್ದಾರೆ. ಕುಡಿಯುವ ನೀರಿನ ಸೌಲಭ್ಯ ಕುರಿತು ಕೆಲಸ ಆರಂಭಿಸಿದ್ದಾರೆ. ತಮ್ಮ ಸಮಸ್ಯೆಗಳನ್ನು ಗ್ರಾಮ ಸಭೆಯಲ್ಲಿ ಮಾತನಾಡಿದರೆ ಪರಿಹಾರ ಸಿಗುವ ಬಗ್ಗೆ ಮಕ್ಕಳಿಗೆ ಖಾತರಿಯಾಗುತ್ತಿದೆ. ಇಂತಹ ಅವಕಾಶವನ್ನು ದೇಶದ ಎಲ್ಲ ಮಕ್ಕಳಿಗೆ ಕಲ್ಪಿಸುವುದು ಇಂದಿನ ಅವಶ್ಯಕತೆ.

– **ಹೆಚ್.ಸಿ.ರಾಘವೇಂದ್ರ**

# ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ

ಪ್ರತಿ ಸಾವಿರ ಜೀವಂತ ಹುಟ್ಟಿದ ಶಿಶುಗಳಲ್ಲಿ ಒಂದು ವರ್ಷದೊಳಗೆ ಮರಣ ಹೊಂದುವ ಶಿಶುಗಳ ಮರಣವನ್ನು ಶಿಶುಮರಣ ಪ್ರಮಾಣವೆನ್ನುತ್ತಾರೆ. ಈ ಶಿಶು ಮರಣ ಪ್ರಮಾಣವು ಹೆಣ್ಣಿನ ಮದುವೆಯ ಮತ್ತು ಹೆರಿಗೆಯ ವಯಸ್ಸು, ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯ ಸೇವೆ, ಪೌಷ್ಟಿಕತೆ, ಹೆರಿಗೆಯ ಸ್ಥಳ ಇವೇ ಮೊದಲಾದ ಅನೇಕ ಅಂಶಗಳನ್ನು ನಿರ್ಧರಿಸುತ್ತದೆ. ಹಾಗಾಗಿಯೇ ಶಿಶು ಮರಣ ಪ್ರಮಾಣವು ದೇಶದ ಅಭಿವೃದ್ಧಿ ಸೂಚಕಗಳಲ್ಲೊಂದಾಗಿದೆ.

ಶಿಶು ಮರಣ ಪ್ರಮಾಣವನ್ನು ಕರಾರುವಾಕ್ಕಾಗಿ ಗಣಿಸುವುದು ತುಸು ಕಷ್ಟ. ಏಕೆಂದರೆ ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಗರ್ಭಿಣಿಯರ ದಾಖಲಾತಿ, ಮಕ್ಕಳ ಜನನ ದಾಖಲಾತಿ ಆಗದೇ ಇರುವುದರಿಂದ, ಶಿಶು ಮರಣ ಪ್ರಮಾಣವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟಕರ. ಹಾಗಾಗಿ ಕರ್ನಾಟಕದ ಶಿಶು ಮರಣ ಪ್ರಮಾಣವು ಹಲವು ಸಮೀಕ್ಷೆಯ ಪ್ರಕಾರ ಹಲವು ರೀತಿಯಾಗಿದೆ.

ಎಸ್.ಆರ್.ಎಸ್. (Sample Registration System) ಪ್ರಕಾರ 1999ರಲ್ಲಿ ಕರ್ನಾಟಕದ ಶಿಶು ಮರಣ ಪ್ರಮಾಣ 53 (ಗ್ರಾಮೀಣ 63 ಮತ್ತು ನಗರ 24). ಅನೇಕ ಯೋಜನೆಗಳ ಜಾರಿಯ ಪರಿಣಾಮವಾಗಿ, 2006ರಲ್ಲಿ ಈ ಪ್ರಮಾಣ 49ಕ್ಕೆ ಇಳಿದಿದೆ (ಗ್ರಾಮೀಣ 54 ಮತ್ತು ನಗರ 38). ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣ ಕಡಿಮೆಯಾಗಿದ್ದರೆ ನಗರ ಪ್ರದೇಶದಲ್ಲಿ ಜಾಸ್ತಿಯಾಗಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ 1992–93ರಲ್ಲಿ 65ರಷ್ಟಿದ್ದ ಶಿಶು ಮರಣ ಪ್ರಮಾಣ 1998–99ರಲ್ಲಿ 52ಕ್ಕೆ ಇಳಿದು 2005–06ರಲ್ಲಿ ಅದು 43ಕ್ಕೆ ಇಳಿದಿದೆ. ಆದರೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ಬದಲಾವಣೆಯನ್ನು ಗಮನಿಸಿದಾಗ, ನಗರ ಪ್ರದೇಶದಲ್ಲಿ ಈ ಪ್ರಮಾಣ ಗ್ರಾಮೀಣ ಪ್ರದೇಶಕ್ಕಿಂತ ಕಡಿಮೆಯಿದ್ದರೂ, 1992–93 ಮತ್ತು 2005–06ರ ಅವಧಿಯಲ್ಲಿ ಶಿಶು ಮರಣ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲೇ ಹೆಚ್ಚು ಕಡಿಮೆಯಾಗಿದೆ.




| | 1992–93 | 1998–99 | 2005–06 |
|---|---|---|---|
| ಒಟ್ಟು | 65 | 52 | 43 |
| ನಗರ | 60 | 40 | 37 |
| ಗ್ರಾಮೀಣ | 68 | 57 | 47 |

ಮೂಲ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ

ಈ ಶಿಶು ಮರಣ ಪ್ರಮಾಣವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಹುಟ್ಟಿದ ನಾಲ್ಕು ವಾರದೊಳಗೆ ಮರಣ ಹೊಂದುವ ಮಕ್ಕಳ ಪ್ರಮಾಣ [Neonatal Mortality Rate (NNMR)] ಮತ್ತು ಹುಟ್ಟಿದ ಐದನೇ ವಾರದಿಂದ ಐವತ್ತೆರಡು ವಾರದೊಳಗೆ ಮರಣ ಹೊಂದುವ ಮಕ್ಕಳ ಮರಣ ಪ್ರಮಾಣ [Postnatal Mortality Rate (PNMR)]. Infant Mortality Rate = NNMR + PNMR

ಲಭ್ಯವಿರುವ ಅನೇಕ ದಾಖಲೆಗಳ ಪ್ರಕಾರ ದೇಶದಲ್ಲಿ ಒಟ್ಟು ಶಿಶು ಮರಣ ಪ್ರಮಾಣದ ಸುಮಾರು ಶೇಕಡಾ 60ರಷ್ಟು ಮಕ್ಕಳು ಹುಟ್ಟಿದ ಮೊದಲ ನಾಲ್ಕು ವಾರದೊಳಗೆ ಮರಣ ಹೊಂದುತ್ತಿದ್ದಾರೆ (1998ರಲ್ಲಿ ಕರ್ನಾಟಕದಲ್ಲಿ ಈ ಪ್ರಮಾಣ ಶೇ. 71.2ರಷ್ಟಿತ್ತು)

ಈ ಹುಟ್ಟಿದ ನಾಲ್ಕು ವಾರದೊಳಗೆ ಮರಣ ಹೊಂದುವ ಮಕ್ಕಳ ಪ್ರಮಾಣ ಇನ್ನೂ ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ಹುಟ್ಟಿದ ಮೊದಲ ವಾರದೊಳಗೆ ಮರಣ ಹೊಂದುವ ಮಕ್ಕಳ ಮರಣ ಪ್ರಮಾಣ [Early Neonatal Mortality Rate (ENNMR)] ಮತ್ತು ನಂತರದ ಮೂರು ವಾರಗಳಲ್ಲಿ ಮರಣ ಹೊಂದುವ ಮಕ್ಕಳ ಮರಣ ಪ್ರಮಾಣ [Late Neonatal Mortality Rate (LNNMR)].

**2010 ಶಿಶು ಮರಣ ಪ್ರಮಾಣದ ಗುರಿಗಳು**

**ರಾಜ್ಯ ಮಕ್ಕಳ ಕ್ರಿಯಾ ಯೋಜನೆ = 30**

**ಕೇಂದ್ರ ಮಕ್ಕಳ ಕ್ರಿಯಾ ಯೋಜನೆ = 30**

ಪುನಃ ಈ ಹುಟ್ಟಿದ ನಾಲ್ಕು ವಾರದೊಳಗೆ ಮರಣ ಹೊಂದುವ ಶಿಶು ಮರಣ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ, ಅವರಲ್ಲಿ ಸುಮಾರು ಶೇ. 60ರಷ್ಟು ಮಕ್ಕಳು ಹುಟ್ಟಿದ ಒಂದು ವಾರದೊಳಗೆ ಮರಣ ಹೊಂದುತ್ತಿದ್ದಾರೆ. ಅಂದರೆ ಹುಟ್ಟಿದ 52 ವಾರದೊಳಗೆ ಮರಣ ಹೊಂದುವ ಶಿಶುಗಳಲ್ಲಿ ಸುಮಾರು ಶೇಕಡಾ 36ರಷ್ಟು ಮಕ್ಕಳು ಹುಟ್ಟಿದ ಒಂದು ವಾರದೊಳಗೆ ಮರಣ ಹೊಂದುತ್ತಿದ್ದಾರೆ ಇನ್ನುಳಿದ ಶೇಕಡಾ 64 ಮಕ್ಕಳು ಮುಂದಿನ 51 ವಾರದಲ್ಲಿ ಮರಣ ಹೊಂದುತ್ತಿದ್ದಾರೆ. ಹಾಗಾಗಿ ಶಿಶು ಮರಣ ಪ್ರಮಾಣವನ್ನು ನಿಯಂತ್ರಿಸಬೇಕಾದರೆ, ಹುಟ್ಟಿದ ಮೊದಲ ವಾರದೊಳಗೆ ಮರಣ ಹೊಂದುವ ಮಕ್ಕಳ ಮರಣ ಪ್ರಮಾಣವನ್ನು ನಿಯಂತ್ರಿಸಬೇಕಾದ ತುರ್ತಿದೆ.

ಶಿಶು ಮರಣ ಪ್ರಮಾಣಕ್ಕೆ ಅನೇಕ ಕಾರಣಗಳನ್ನು ಗುರುತಿಸಬಹುದು. ಮದುವೆಯ ವಯಸ್ಸು, ಗರ್ಭಧರಿಸಿದ ವಯಸ್ಸು, ಗರ್ಭಿಣಿಯರಲ್ಲಿನ ಅಪೌಷ್ಟಿಕತೆ, ರಕ್ತಹೀನತೆ, ಹೆಚ್ಚು ಮಕ್ಕಳನ್ನು ಹೆರುವುದು, ಎರಡು ಹೆರಿಗೆಯ ನಡುವಿನ ಅಂತರ ಮೊದಲಾದವುಗಳು. ಇವಲ್ಲದೆ ಇವುಗಳ ಜೊತೆ ಬಡತನ, ವೃತ್ತಿ, ಅನಕ್ಷರತೆ, ವೈದ್ಯಕೀಯ ಸೌಲಭ್ಯದ ಗುಣಮಟ್ಟ ಮತ್ತು ಅದರ ಅಲಭ್ಯತೆ, ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ ಇವೇ ಮೊದಲಾದವುಗಳು ಮುಖ್ಯ ಕಾರಣವಾಗುತ್ತವೆ.

**ತಾಯಂದಿರ ಮರಣ ಪ್ರಮಾಣ (Maternal Mortality Rate/Ratio)**

ಪ್ರತಿ 1,00,000 ಜೀವಂತ ಹೆರಿಗೆಗಳಲ್ಲಿ ಮರಣ ಹೊಂದುವ ತಾಯಂದಿರ ಮರಣವನ್ನು ತಾಯಂದಿರ ಮರಣ ಪ್ರಮಾಣವೆನ್ನುತ್ತಾರೆ. ಈ ಪ್ರಮಾಣವನ್ನು 1,00,000 ಜೀವಂತ ಹೆರಿಗೆಗಳಿಗೆ ಗಣಿಸುವುದರಿಂದ, ಜಿಲ್ಲೆ/ತಾಲ್ಲೂಕು ಮಟ್ಟದಲ್ಲಿ ಇದನ್ನು ದಾಖಲಿಸುವುದು ತುಸು ಕಷ್ಟ. ಅಲ್ಲದೆ ರಾಜ್ಯದಲ್ಲಿ ಅನೇಕ ಹೆರಿಗೆಗಳು ಮನೆಯಲ್ಲೇ ಆಗುತ್ತಿರುವುದರಿಂದ, ಮನೆಯಲ್ಲಾಗುವ ಹೆರಿಗೆ ಸಮಯದಲ್ಲಿ ಮರಣಿಸುವ ತಾಯಂದಿರ ಕುರಿತು ಅನೇಕ ಬಾರಿ ಮಾಹಿತಿ ಇರುವುದಿಲ್ಲ. ಹಾಗಾಗಿ ಹೆಚ್ಚಿನ ಸಮೀಕ್ಷೆಗಳು ಈ ಪ್ರಮಾಣಕ್ಕೆ 3–4 ವರ್ಷಗಳಲ್ಲಾದ ಹೆರಿಗೆ ಮತ್ತು ತಾಯಂದಿರ ಮರಣವನ್ನು ಗಣನೆಗೆ ತೆಗೆದುಕೊಂಡು ಅದನ್ನು ಒಂದು ವರ್ಷಕ್ಕೆ ಲೆಕ್ಕ ಹಾಕುತ್ತಾರೆ. ಅದು ಸೂಕ್ತವೂ ಹೌದು. ಈ ಪ್ರಮಾಣವನ್ನು ಗಣಿಸಲು ಸಾಮಾನ್ಯವಾಗಿ 15–49 ವಯಸ್ಸಿನ ಹೆಂಗಸರಲ್ಲಿ ಮಾತ್ರ ಪರಿಗಣಿಸುತ್ತಾರೆ.

**ತಾಯಂದಿರ ಮರಣ ಪ್ರಮಾಣದ ಗುರಿಗಳು**

| | 2007 | 2010 |
|---|---|---|
| ರಾಜ್ಯ ಮಕ್ಕಳ ಕ್ರಿಯಾ ಯೋಜನೆ | 140 | 90 |
| ಕೇಂದ್ರ ಮಕ್ಕಳ ಕ್ರಿಯಾ ಯೋಜನೆ | – | 100 |
| ಸಹಸ್ರಮಾನದ ಗುರಿಗಳು | 200 | 109 |

ಎಸ್.ಆರ್.ಎಸ್ ಸಮೀಕ್ಷೆಯ ಪ್ರಕಾರ 1997–98ರಲ್ಲಿ 245ರಷ್ಟಿದ್ದ ರಾಜ್ಯದ ತಾಯಂದಿರ ಮರಣ ಪ್ರಮಾಣ 1999–2001ರಲ್ಲಿ 266ಕ್ಕೆ ಏರಿ 2001–2003ರಲ್ಲಿ 228ಕ್ಕೆ ಇಳಿದಿದೆ.

ಇದೇ ಸಮೀಕ್ಷೆಯ ಪ್ರಕಾರ ತಾಯಂದಿರ ಮರಣ ದರ 1997–98ರಲ್ಲಿ 22.5ರಷ್ಟಿದ್ದು 1999–2001ರಲ್ಲಿ 22.9ಕ್ಕೆ ಏರಿ 2001–02ರಲ್ಲಿ 18.9ಕ್ಕೆ ಇಳಿದಿದೆ ಮತ್ತು ಇದೇ ವರ್ಷದಲ್ಲಿ ಹೆರಿಗೆಯಲ್ಲಿ ಜೀವಕ್ಕೆ ತೊಂದರೆಯಾಗುವ ಪ್ರಮಾಣ ಶೇಕಡಾ 0.7.

ಎಸ್.ಆರ್.ಎಸ್. (Sample Registration System) ಮಾಹಿತಿಯಂತೆ 2001–03ರ ಅವಧಿಯಲ್ಲಿ ಭಾರತದಲ್ಲಿ ವಿವಿಧ ವಯಸ್ಸಿನಲ್ಲಿ ಹೆರಿಗೆ ಸಮಯದಲ್ಲಿ ಮರಣ ಹೊಂದುವ ತಾಯಂದಿರ ಮರಣ ಪ್ರಮಾಣವನ್ನು




ಇಲ್ಲಿ ಕೊಡಲಾಗಿದೆ. ಈ ಮಾಹಿತಿಯ ಪ್ರಕಾರ ಹೆರಿಗೆ ಸಮಯದಲ್ಲಿ ಮರಣ ಹೊಂದುವವರಲ್ಲಿ 20–24 ವರ್ಷದವರೇ ಹೆಚ್ಚಿದ್ದಾರೆ. ಹಾಗೆಯೇ ವಿವಿಧ ಕಾರಣಗಳಿಂದ ಮರಣ ಹೊಂದುವವರನ್ನು ಪಟ್ಟಿ ಮಾಡಿದರೆ ಹೆಚ್ಚಿನ ತಾಯಂದಿರು ಪ್ರಸವ ಕಾಲದಲ್ಲಿ ಅತೀವ ರಕ್ತಸ್ರಾವದಿಂದ ಮರಣ ಹೊಂದಿದ್ದಾರೆ.

ತಾಯಂದಿರ ಮರಣಕ್ಕೆ ಅವರ ಮದುವೆಯ ವಯಸ್ಸು, ಗರ್ಭ ಧರಿಸುವ ವಯಸ್ಸು, ಪ್ರಸವ ಪೂರ್ವ ತಪಾಸಣೆ, ಹೆರಿಗೆ ಸ್ಥಳ, ಹೆರಿಗೆಯ ಸಮಯದಲ್ಲಿ ರಕ್ತಹೀನತೆ, ಅಪೌಷ್ಟಿಕತೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆ, ಸೂಕ್ತ ಸಮಯದಲ್ಲಿ ವೈದ್ಯ ಮತ್ತು ದಾದಿಯರ ಅಲಭ್ಯತೆ ಇವೇ ಮೊದಲಾದವುಗಳ ಜೊತೆಗೆ ಹೆರಿಗೆಯ ಸಮಯದಲ್ಲಿ ರಕ್ತಸ್ರಾವ, ಗರ್ಭಪಾತ, ನಂಜುಂಟಾಗುವುದು, ಕ್ಲಿಷ್ಟ ಹೆರಿಗೆಗಳೂ ಕೂಡ ಕಾರಣವಾಗುತ್ತವೆ.

Sample Registration System 2004ರ ಪ್ರಕಾರ ರಾಜ್ಯದಲ್ಲಿ ವಯಸ್ಸಿಗನುಗುಣವಾಗಿ ತಾಯಂದಿರ ಮರಣ ಪ್ರಮಾಣ ಈ ರೀತಿಯಾಗಿದೆ. ರಾಜ್ಯದಲ್ಲಿ ನಡೆಯುವ ಮೂರು ಮದುವೆಗಳಲ್ಲಿ ಒಂದು ಮದುವೆ 18 ವರ್ಷಕ್ಕಿಂತ ಒಳಗಿನ ಹೆಣ್ಣುಮಗುವಿನ ಮದುವೆಯಾಗಿರುತ್ತದೆ, ಅಂದರೆ ಶೇಕಡಾ 32ರಷ್ಟು. ಇವರಲ್ಲಿ ಶೇಕಡಾ 12ರಷ್ಟು ಹೆಣ್ಣುಮಕ್ಕಳು ಹೆರಿಗೆಯ ಸಮಯದಲ್ಲಿ ಸಾಯುತ್ತಾರೆ.

ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣವನ್ನು ಕಡಿಮೆ ಮಾಡಲು ರಾಜಕೀಯ ಇಚ್ಛಾಶಕ್ತಿಯ ಅವಶ್ಯಕತೆಯಿದೆ. ಕರ್ನಾಟಕವೂ ಸೇರಿದಂತೆ ಬಹುತೇಕ ರಾಜ್ಯಗಳು ತಮ್ಮ ಒಟ್ಟು ಆಯವ್ಯಯದಲ್ಲಿ ಆರೋಗ್ಯಕ್ಕೆ ಕಡಿಮೆ ಹಣವನ್ನು ಮೀಸಲಿಡುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆ ಮತ್ತು ವೃತ್ತಿನಿರತ ವೈದ್ಯ ಹಾಗೂ ದಾದಿಯರನ್ನು ಹೆಚ್ಚೆಚ್ಚು ನೇಮಿಸುವುದರ ಮೂಲಕ ಈ ಮರಣ ಪ್ರಮಾಣಗಳನ್ನು ಕಡಿಮೆ ಮಾಡಲು ಸಾಧ್ಯವಿದೆ.

**– ಜಿ.ಸಿ. ಸತೀಶ್**




# ಲೋಕಸಭಾ ಚುನಾವಣಾ ಪ್ರಣಾಳಿಕೆಗಳಲ್ಲಿ ಮಕ್ಕಳ ಬೇಡಿಕೆಗಳಿಗೆ ಮನ್ನಣೆ ನೀಡಿ

- 18 ವರ್ಷ ಆಗುವ ತನಕ ಎಲ್ಲರೂ ಮಕ್ಕಳೆ. ಸಂವಿಧಾನದ ಪರಿಚ್ಛೇದ 21 (ಎ) ಮತ್ತು 24ನ್ನು ತಿದ್ದುಪಡಿ ಮಾಡಿ.
- ರಾಷ್ಟ್ರೀಯ ಆಯವ್ಯಯದಲ್ಲಿ ಮಕ್ಕಳಿಗಾಗಿ ಹೆಚ್ಚು ಹಣ ಮೀಸಲಿಡಿ. ಶಿಕ್ಷಣಕ್ಕಾಗಿ 2+ % ಹಾಗೂ ಆರೋಗ್ಯಕ್ಕಾಗಿ 4+ % ಮತ್ತು ರಕ್ಷಣೆಗಾಗಿ ಹೆಚ್ಚಿನ ಹಣ ಬೇಕಿದೆ.
- ರಾಷ್ಟ್ರೀಯ ಮಕ್ಕಳ ನೀತಿಯಲ್ಲಿ ಮಕ್ಕಳ ಹತ್ಯೆ, ಶಿಶು ಹತ್ಯೆ, ಭ್ರೂಣ ಹತ್ಯೆ, ಹಿಂಸೆ, ಶಾಲೆ ಮತ್ತು ಮನೆಯಲ್ಲಿ ಶಿಕ್ಷೆ ತಡೆಯುವಂತೆ ಮಾರ್ಪಾಡು ಮಾಡಿ ಸಮಗ್ರ ಮಕ್ಕಳ ರಕ್ಷಣೆಯ ಕಾಯಿದೆ ಹೊರಡಿಸಿ.
- ಮಕ್ಕಳ ನಡುವೆ ಯಾವುದೇ ಕಾರಣದಿಂದ ತಾರತಮ್ಯ ಉಂಟಾಗದಂತೆ ರಕ್ಷಿಸಿ – ಲಿಂಗ, ಧರ್ಮ, ಜಾತಿ, ಭಾಷೆ, ಅಂಗವಿಕಲತೆ, ಪ್ರಾಂತ್ಯ ಮಕ್ಕಳ ನಡುವೆ ಗೋಡೆಗಳಾಗದಿರಲಿ.



- ಶಿಕ್ಷಣದ ಮೂಲಭೂತ ಹಕ್ಕಿನ ಮಸೂದೆಗೆ ನ್ಯಾಯ ಒದಗಿಸಿ. 6 ವರ್ಷದೊಳಗಿನ ಮಕ್ಕಳಿಗೆ ಆಟದ ಮೂಲಕ ಶಿಕ್ಷಣ ಕೊಡಿಸಿ. 14–18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ವೃತ್ತಿಪರ ಶಿಕ್ಷಣ ಅಳವಡಿಸಿ.
- ಶಾಲಾ ಪಠ್ಯಕ್ರಮದಲ್ಲಿ ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳನ್ನು ಸೇರಿಸಿ.
- ಶಿಕ್ಷಣದ ಹಕ್ಕಿನ ವಂಚನೆಯನ್ನು ಭಾರತ ಸಂವಿಧಾನ ದತ್ತ ಹಕ್ಕುಗಳ ಉಲ್ಲಂಘನೆಯೆಂದು ಪರಿಗಣಿಸಿ.
- ಸಮಾನ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಸಮಾನ ಮತ್ತು ನೆರೆಹೊರೆ ಶಾಲೆ ವ್ಯವಸ್ಥೆ ಜಾರಿಗೊಳಿಸಿ.



- ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಗೌರವಿಸಿ – ಆರು ವರ್ಷದೊಳಗಿನ ಎಲ್ಲ ಮಕ್ಕಳಿಗೆ ಅಂಗನವಾಡಿ ಸೇವೆ ಕೊಡಿ. ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿಶೇಧಿಸಿ. ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ಖಾತರಿಗೊಳಿಸಿ. ಶಾಲೆಗಳಲ್ಲಿ ದೈಹಿಕ ಶಿಕ್ಷೆ ಕೊಡುವುದನ್ನು ತಪ್ಪಿಸಿ.
- ಅನೈತಿಕ ಮಾನವ ಸಾಗಣೆ ತಡೆ ಕಾಯಿದೆಯನ್ನು ತಿದ್ದುಪಡಿ ಮಾಡಿ, ಅನೈತಿಕ ಸಾಗಣೆ ಎಂದರೆ – ಬಾಲಕಾರ್ಮಿಕರನ್ನಾಗಿಸಲು, ಅಂಗಾಂಗ ಕಳವು ಮಾಡಲು, ಮಕ್ಕಳನ್ನು ಲೈಂಗಿಕ ಚಿತ್ರ ಮಾಡಲು ಬಳಸುವುದು, ಶಿಶು ಪೀಡನೆ, ಮಕ್ಕಳ ಮೇಲೆ ಲೈಂಗಿಕ ಶೋಷಣೆ, ಧಾರ್ಮಿಕ ನೆಪಗಳನ್ನೊಡ್ಡಿ ಮಕ್ಕಳನ್ನು ಲೈಂಗಿಕ ಶೋಷಣೆಗೆ ಒಡ್ಡುವುದು (ದೇವದಾಸಿ ಪದ್ಧತಿ) ಮತ್ತಿತರ ವಿಚಾರಗಳನ್ನು ಒಳಗೊಂಡಂತೆ ಬದಲಾಯಿಸಿ.



- ಎಲ್ಲ ಜಿಲ್ಲೆಗಳಲ್ಲಿ ಮಕ್ಕಳ ನ್ಯಾಯ ಮಂಡಳಿಗಳು ಮತ್ತು ಮಕ್ಕಳ ಕಲ್ಯಾಣ ಸಮಿತಿಗಳನ್ನು ತಕ್ಷಣವೇ ಸ್ಥಾಪಿಸಿ ಮತ್ತು ಸದೃಢಗೊಳಿಸಿ
- ಮಕ್ಕಳ ಕಳವು, ಕಣ್ಮರೆಯಾಗುವ ಪ್ರಸಂಗಗಳೇ ಮೊದಲಾದವುಗಳು ಹಾಗೂ ಮಕ್ಕಳ ಅಭಿವೃದ್ಧಿ ಕುರಿತು ಗಮನ ನೀಡಲು ಮಕ್ಕಳ ಪತ್ತೆ ವ್ಯವಸ್ಥೆಯನ್ನು ಜಾರಿಗೊಳಿಸಿ.
- ಎಲ್ಲ ರಾಜ್ಯಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಜ್ಯ ಆಯೋಗಗಳನ್ನು ಸ್ಥಾಪಿಸಿ.



- ಬಡವರು ಮತ್ತು ಮಕ್ಕಳ ಪರವಾದ ಆರೋಗ್ಯ ಹಾಗೂ ಪೌಷ್ಟಿಕತೆ ನೀತಿಯನ್ನು ಜಾರಿ ಮಾಡಿ.
- ರಾಷ್ಟ್ರೀಯ ಆಹಾರ ಮತ್ತು ಕೃಷಿ ನೀತಿಯನ್ನು ಸೂಕ್ತ ಬದಲಾವಣೆಗಳೊಂದಿಗೆ ಜಾರಿ ಮಾಡಬೇಕು.
- ಮಹಿಳೆಯರ ಆರೋಗ್ಯವನ್ನು, ಗರ್ಭಿಣಿಯರು ಮತ್ತು ತಾಯಂದಿರ ಆರೋಗ್ಯ ಸೇವೆ ಎಂದು ಮಾತ್ರ ಪರಿಗಣಿಸದೆ, ಹದಿವಯಸ್ಸಿನವರ ಆರೋಗ್ಯ ಸೇವೆಗಳು ಎಂದೂ ಪರಿಗಣಿಸಿ. ಕಡಿಮೆ ತೂಕದ ಮಕ್ಕಳು ಹುಟ್ಟುವುದನ್ನು ತಡೆಯಲು, ಹೆರಿಗೆ ಸಮಯದಲ್ಲಿ ತಾಯಂದಿರು ಸಾಯುವುದನ್ನು ತಡೆಯುವುದು ಮತ್ತು ಮಕ್ಕಳ ಅಪೌಷ್ಟಿಕತೆ ಹಾಗೂ ಮಕ್ಕಳ ಮರಣ ತಡೆಯಲು ಇದು ಅತ್ಯಾವಶ್ಯಕ.

CACL-K

KCRO
KARNATAKA CHILD RIGHTS OBSERVATORY